MAA ಫ್ರೆಂಡ್ಸ್ ಸಾರಥ್ಯದಲ್ಲಿ...

# ಯುವ ಮಾರ್ಗ

YUVA MARGA NEWS PAPER
VOICE OF THE NATION

ಕನ್ನಡ ದಿನಪತ್ರಿಕೆ "ಇದು ರಾಷ್ಟ್ರದ ಧ್ವನಿ"

ಸಂಪಾದಕರು : ಅನಿಲ ಕುಮಾರ್ ಹೆಚ್
Cell : 9743497111

YUVA MARGA KANNADA DAILY NEWS PAPER

ಪ್ರಧಾನ ಸಂಪಾದಕರು : ಮನೋಜ ಮಿಶ್ರಾ
Cell : 9743496111

ಸಂಪುಟ: 05 | ಸಂಚಿಕೆ: 43 | ಭಾನುವಾರ :30-11-2025 | ರಾಯಚೂರು | RNI NO: KARKAN/2022/90446 | ಪುಟ: 4 | ಬೆಲೆ: ರೂ: 2-00

VOLUME: 05 | ISSUE: 43 | SUNDAY : 30-11-2025 | RAICHUR | EMAIL: YUVAMARGA@GMAIL.COM | PAGE: 4 | PRICE: Rs: 2-00

# ಕುರ್ಚಿ ಕಾಳಗಕ್ಕೆ ವಿರಾಮ : ಹೈಕಮಾಂಡ್ ತೀರ್ಮಾನವೇ ಅಂತಿಮ



**ಬೆಂಗಳೂರು, ನ. 29–** ನಮ್ಮ ನಡುವೆ ಯಾವುದೇ ಭಿನ್ನಾಭಿಪ್ರಾಯ ಇಲ್ಲ. ನಾವಿಬ್ಬರು ಒಟ್ಟಾಗಿದ್ದೇವೆ, ಒಗ್ಗಟ್ಟಾಗಿದ್ದೇವೆ. ಅಧಿಕಾರ ಹಂಚಿಕೆಗೆ ಸಂಬಂಧಿಸಿದಂತೆ ಹೈಕಮಾಂಡ್‌ನ ತೀರ್ಮಾನಕ್ಕೆ ನಾವಿಬ್ಬರೂ ಬದ್ಧ ಎಂದು ಮುಖ್ಯಮಂತ್ರಿ ಸಿದ್ಧರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸಾರಿದರು.

ಮುಖ್ಯಮಂತ್ರಿಗಳ ಅಧಿಕೃತ ನಿವಾಸ ಕಾವೇರಿಯಲ್ಲಿಂದು ಈ ಇಬ್ಬರು ನಾಯಕರು ಉಪಹಾರ ಸಭೆ ನಡೆಸಿ ಜಂಟಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಹೈಕಮಾಂಡ್ ತೀರ್ಮಾನಕ್ಕೆ ಬದ್ಧರಾಗಿ ನಡೆದುಕೊಳ್ಳುತ್ತೇವೆ. ಅದರಂತೆ ಕೆಲಸ ಮಾಡುತ್ತೇವೆ ಎಂದರು. ಹೀಗಾಗಿ ಅಧಿಕಾರ ಹಂಚಿಕೆಗೆ ಸಂಬಂಧಿಸಿದಂತೆ ರಾಜ್ಯ ಕಾಂಗ್ರೆಸ್ ನಲ್ಲಿ ತಾರಕಕ್ಕೇರಿದ ಕುರ್ಚಿ ಕಾಳಗಕ್ಕೆ ಸದ್ಯ ವಿರಾಮ ಬಿದ್ದಂತಾಗಿದೆ.ಅಧಿಕಾರ ಹಂಚಿಕೆಯ ಒಪ್ಪಂದ, ವಚನ ಪಾಲನೆಗೆ ಸಂಬಂಧಿಸಿದ ಪ್ರಶ್ನೆಗಳಿಗೆ ಈ ಇಬ್ಬರು ನಾಯಕರು ಯಾವುದೇ ಸ್ಪಷ್ಟ ಉತ್ತರ ನೀಡದೆ ಹೈಕಮಾಂಡ್ ತೀರ್ಮಾನಕ್ಕೆ ಬದ್ಧ, ಹೈಕಮಾಂಡ್ ತೀರ್ಮಾನವೇ ಅಂತಿಮ ಎಂಬ ಹೇಳಿಕೆಗಳನ್ನೇ ಪುನರುಚ್ಚರಿಸಿ, ಅಧಿಕಾರ ಹಂಚಿಕೆಯ ಪ್ರಶ್ನೆಗಳಿಗೆ ಸಮರ್ಪಕ ಉತ್ತರ ನೀಡದೆ ನುಣುಚಿಕೊಂಡರು.

ನಾಳೆಯಿಂದ ಯಾವುದೇ ಗೊಂದಲಗಳು ಇರುವುದಿಲ್ಲ, ಈಗಲೂ ಇಲ್ಲ. ನಮ್ಮ ನಡುವೆ ಆಗಿರುವ ಈ ಒಪ್ಪಂದದ ಬಗ್ಗೆ ಹೈಕಮಾಂಡ್‌ಗೆ ಮಾಹಿತಿ ನೀಡಲಾಗುವುದು ಎಂದು ಮುಖ್ಯಮಂತ್ರಿ ಸಿದ್ಧರಾಮಯ್ಯ ಹೇಳಿದರು.

ಇತ್ತೀಚೆಗೆ ಅಧಿಕಾರ ಹಸ್ತಾಂತರದ ಬಗ್ಗೆ ಉಂಟಾಗಿರುವ ಗೊಂದಲಗಳಿಗೆ ಕೆಲ ಮಾಧ್ಯಮಗಳೇ ಕಾರಣ ಎಂದು ಅವರು ಆರೋಪಿಸಿದರು. ನಮ್ಮಲ್ಲಿ ಯಾವುದೇ ಭಿನ್ನಾಭಿಪ್ರಾಯಗಳಿಲ್ಲ, ಮುಂದೆಯೂ ಇರುವುದಿಲ್ಲ ಎಂದು ಅವರು ಸ್ಪಷ್ಟಪಡಿಸಿದರು.

ನಾವಿಬ್ಬರೂ ಪಕ್ಷದ ವರಿಷ್ಠರು ಸೂಚಿಸಿದಂತೆ ನಡೆದುಕೊಳ್ಳಲು ತೀರ್ಮಾನಿಸಿದ್ದೇವೆ. ವಿಧಾನಮಂಡಲದ ಅಧಿವೇಶನ ಇರುವುದರಿಂದ ಇಬ್ಬರಿಗೂ ಗೊಂದಲಗಳನ್ನು ತಿಳಿಗೊಳಿಸುವ ಕೆಲಸ ಮಾಡಲು ಹೈಕಮಾಂಡ್ ಸೂಚಿಸಿದೆ. ನಾಳೆಯಿಂದ ಯಾವುದೇ ಗೊಂದಲ ಇರಲ್ಲ ಎಂದರು.

ಗೊಂದಲಗಳನ್ನು ಮಾಧ್ಯಮಗಳೇ ಸೃಷ್ಟಿಸಿವೆ. ಕೆಲ ಶಾಸಕರು, ಸಚಿವ ಸಂಪುಟ ಪುನಾರಚನೆಗೆ ಸಂಬಂಧಿಸಿದಂತೆ ದೆಹಲಿಗೆ ಭೇಟಿ ನೀಡಿದ್ದಾರೆ. ಹಾಗೆಂದು ಅವರು ನಾಯಕತ್ವ ವಿರುದ್ಧ ಇದ್ದಾರೆ ಎಂದುಕೊಳ್ಳುವ ಅಗತ್ಯವಿಲ್ಲ. ಶಾಸಕರು ನನ್ನನ್ನು ಭೇಟಿ ಮಾಡಿ ದೆಹಲಿ ಭೇಟಿಯ ಕಾರಣ ತಿಳಿಸಿದ್ದಾರೆ. ಯಾವುದೇ ಸಚಿವರಾಗಲೀ, ಶಾಸಕರಾಗಲೀ ಸರ್ಕಾರದ ವಿರುದ್ಧ ಇಲ್ಲ ಎಂದು ಮುಖ್ಯಮಂತ್ರಿ ಸಿದ್ಧರಾಮಯ್ಯ ಸ್ಪಷ್ಟಪಡಿಸಿದರು.

ಕಾಂಗ್ರೆಸ್ ಪಕ್ಷವನ್ನು 2028 ರಲ್ಲಿ ಮತ್ತೆ ಅಧಿಕಾರಕ್ಕೆ ತರಬೇಕು ಎಂಬ ತೀರ್ಮಾನ ಮಾಡಿದ್ದೇವೆ. ಆ ಕಾರ್ಯತಂತ್ರಗಳ ಬಗ್ಗೆ ಚರ್ಚೆ ನಡೆಸಿದ್ದೇವೆ. ಇತ್ತೀಚಿನ ದಿನಗಳಲ್ಲಿ ಅನಗತ್ಯವಾಗಿ ಕೆಲವು ಗೊಂದಲಗಳು ನಿರ್ಮಾಣವಾಗಿವೆ. ನಾವು ಈ ಬಗ್ಗೆ ಮಾತನಾಡಿದ್ದೇವೆ. 2028ರ ಚುನಾವಣೆ, ಸ್ಥಳೀಯ ಸಂಸ್ಥೆಗಳ ಚುನಾವಣೆ ನಮಗೆ ಬಹಳ ಮುಖ್ಯ. ಈ ಬಗ್ಗೆಯೂ ಚರ್ಚಿಸಿದ್ದೇವೆ. 2023ರ ವಿಧಾನಸಭಾ ಚುನಾವಣೆಯಲ್ಲಿ ನಾನು ಮತ್ತು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಒಟ್ಟಾಗಿ ಕೆಲಸ ಮಾಡಿದಂತೆ ಮುಂದೆಯೂ ಒಟ್ಟಾಗಿ ಸಾಗುವ ತೀರ್ಮಾನ ಮಾಡಿದ್ದೇವೆ. ನಮ್ಮಲ್ಲಿ ಯಾವುದೇ ಭಿನ್ನಾಭಿಪ್ರಾಯಗಳಿಲ್ಲ ಎಂದು ಪುನರುಚ್ಚರಿಸಿದರು.

ಬೆಳಗಾ ವಿಯಲ್ಲಿ ಡಿ. 8 ರಿಂದ ಅಧಿವೇಶನ ಪ್ರಾರಂಭವಾಗಲಿದೆ. ನಾವು ವಿರೋಧ ಪಕ್ಷದವರನ್ನು ಹಿಂದೆಯೂ ಸಮರ್ಥವಾಗಿ ಎದುರಿಸಿದ್ದೇವೆ. ಮುಂದೆ ಯೂ ಎದರಿಸುತ್ತೇವೆ. ಬಿಜೆಪಿ–ಜೆಡಿಎಸ್ ಗೆ ಅಪಪ್ರಚಾರ, ಸುಳ್ಳು ಆರೋಪಗಳು, ಅಪವಾದಗಳನ್ನು ಮಾಡುವುದು ಚಾಳಿಯಾಗಿದೆ. ಇವರಿಬ್ಬರನ್ನು ಸಮರ್ಥವಾಗಿ ನಾನು ಮತ್ತು ಉಪಮುಖ್ಯಮಂತ್ರಿಗಳು ಎದುರಿಸುತ್ತೇವೆ. ಅದಕ್ಕೆ ಅಗತ್ಯವಾದ ಕಾರ್ಯತಂತ್ರಗಳನ್ನು ರೂಪಿಸಿಕೊಂಡಿದ್ದೇವೆ ಎಂದರು.

ಅಧಿವೇಶನದಲ್ಲಿ ಬಿಜೆಪಿ– ಜೆಡಿಎಸ್ ಪಕ್ಷಗಳು ಅವಿಶ್ವಾಸ ನಿರ್ಣಯ ತರುವ ಬಗ್ಗೆ ಪತ್ರಿಕೆಗಳಲ್ಲಿ ವರದಿಯಾಗಿದೆ. ಇದು ಸಾಧ್ಯವಿಲ್ಲ. ನಾವು 142 ಜನ ಇದ್ದೇವೆ. ಬಿಜೆಪಿ– 64, ಜೆಡಿಎಸ್– 18 ಶಾಸಕರಿದ್ದಾರೆ. ಅವರ ಅವಿಶ್ವಾಸ ನಿರ್ಣಯ ವಿಫಲ ಪ್ರಯತ್ನ ಎಂದು(2ನೇಪುಟಕ್ಕೆ..)

---

### ಶಿಕ್ಷಕರ ದಿನಾಚರಣೆ: ಖಾಸಗಿ ಶಾಲಾ ಶಿಕ್ಷಕರಿಗೆ ಚಿನ್ನದ ಪದಕ ಪ್ರದಾನ

## ಕಲ್ಯಾಣ ಕರ್ನಾಟಕ ಭಾಗದ ಅಭಿವೃದ್ಧಿಗೆ ವಾರ್ಷಿಕ 5 ಸಾವಿರ ಕೋಟಿ ಅನುದಾನ: ಸಚಿವ ಬೋಸರಾಜು





**ಯುವಮಾರ್ಗ ಸುದ್ದಿ**

**ಮಾನ್ವಿ,ಣ.29–** ಪಟ್ಟಣದ ಈದ್ಗಾ ಫಂಕ್ಷನ್ ಹಾಲ್‌ನಲ್ಲಿ ತಾಲೂಕು ಖಾಸಗಿ ಶಾಲಾ ಶಿಕ್ಷಣ ಸಂಸ್ಥೆಗಳ ಒಕ್ಕೂಟ ವತಿಯಿಂದ ನಡೆದ ಶಿಕ್ಷಕರ ದಿನಾಚರಣೆ ಹಾಗೂ ಉತ್ತಮ ಶಿಕ್ಷಕರಿಗೆ ಪ್ರಶಸ್ತಿ ಪ್ರದಾನ ಸಮಾರಂಭವನ್ನು ರಾಜ್ಯ ಸಣ್ಣ ನೀರಾವರಿ ಹಾಗೂ ವಿಜ್ಞಾನ ತಂತ್ರಜ್ಞಾನ ಸಚಿವರಾದ ಎನ್.ಎಸ್. ಬೋಸರಾಜು ಅವರು ಉದ್ಘಾಟಿಸಿದರು.

ಸಮಾರಂಭದಲ್ಲಿ ಮಾತನಾಡಿದ ಸಚಿವರು, ಕಲ್ಯಾಣ ಕರ್ನಾಟಕ ಭಾಗದ ಅಭಿವೃದ್ಧಿಗಾಗಿ ಸರ್ಕಾರ ಸಾಕಷ್ಟು ಶ್ರಮಿಸುತ್ತಿದೆ. ಕಲ್ಯಾಣ ಕರ್ನಾಟಕ ಅಭಿವೃದ್ಧಿ ಮಂಡಳಿಯಿಂದ ಈ ಭಾಗದ ಅಭಿವೃದ್ಧಿಗೆ ವಾರ್ಷಿಕವಾಗಿ ರೂ 5 ಸಾವಿರ ಕೋಟಿ ಅನುದಾನವನ್ನು ಮುಖ್ಯಮಂತ್ರಿಗಳು ನೀಡುತ್ತಿದ್ದಾರೆ. ಇದರಲ್ಲಿ ಶೇ. 25 ರಷ್ಟು ಅನುದಾನವನ್ನು ಸರ್ಕಾರಿ ಶಾಲೆಗಳ ಅಭಿವೃದ್ಧಿಗಾಗಿ ಮೀಸಲಿಡಲಾಗಿದೆ ಎಂದು ತಿಳಿಸಿದರು.

ಖಾಸಗಿ ಶಿಕ್ಷಣ ಸಂಸ್ಥೆಗಳ ಕೊಡುಗೆಯನ್ನು ಶ್ಲಾಘಿಸಿದ ಅವರು, "ಶೈಕ್ಷಣಿಕ ಪ್ರಗತಿಗೆ ಸರ್ಕಾರದೊಂದಿಗೆ ಖಾಸಗಿ ಶಿಕ್ಷಣ ಸಂಸ್ಥೆಗಳು ಸಹಕಾರ ನೀಡುತ್ತಿರುವುದರಿಂದ ಗ್ರಾಮೀಣ ಭಾಗದಲ್ಲಿ ಸಾಕ್ಷರತೆಯ ಪ್ರಮಾಣ ಹೆಚ್ಚುತ್ತಿದೆ. ಇದನ್ನು ಸರ್ಕಾರ ಪರಿಗಣಿಸಿ, 1995ರ ನಂತರ ಪ್ರಾರಂಭವಾದ ಖಾಸಗಿ ಶಾಲೆಗಳಿಗೆ ಅನುದಾನ ನೀಡಲು ಶಿಕ್ಷಣ ಇಲಾಖೆಯಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಮಾನ್ವಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿರುವ 100ಕ್ಕೂ ಹೆಚ್ಚು ಖಾಸಗಿ ಶಾಲೆಗಳು ಸೂಕ್ತ ದಾಖಲೆಗಳೊಂದಿಗೆ ಅರ್ಜಿ ಸಲ್ಲಿಸಿ ಅನುದಾನ ಪಡೆಯಬಹುದು," ಎಂದರು.

**ಖಾಸಗಿ ಶಾಲೆಗಳ ನಿಯಮಗಳ ಪರಿಶೀಲನೆ :**

ಮಹಾನಗರಗಳ ಶಾಲೆಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ರೂಪಿಸಲಾದ ಮಕ್ಕಳ ಸುರಕ್ಷತಾ ನಿಯಮಗಳಿಂದ ಜಿಲ್ಲಾ ಮತ್ತು ತಾಲೂಕು ಮಟ್ಟದ ಖಾಸಗಿ ಶಾಲೆಗಳಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಈ ಕುರಿತು ಪರಿಶೀಲನೆ ಮಾಡಿ ಕ್ರಮ ಕೈಗೊಳ್ಳಲಾಗುವುದು ಎಂದು ಸಚಿವರು ಭರವಸೆ ನೀಡಿದರು.

ಯಾವುದೇ ಮಗು ಶಾಲೆಯಿಂದ ಹೊರಗುಳಿಯಬಾರದು ಎಂಬ ಉದ್ದೇಶದಿಂದ ಸರ್ಕಾರಿ ಶಾಲೆಗಳಲ್ಲಿ ಉಚಿತ ಶಿಕ್ಷಣ, ಶೈಕ್ಷಣಿಕ ಪರಿಕರ ವಿತರಣೆ ಹಾಗೂ ಮಧ್ಯಾಹ್ನದ ಬಿಸಿಯೂಟದ ವ್ಯವಸ್ಥೆ ಮಾಡಲಾಗಿದೆ ಎಂದು ವಿವರಿಸಿದರು.

**ಶಿಕ್ಷಣದಲ್ಲಿ ಆಂಗ್ಲ ಭಾಷೆಗೆ ಒತ್ತು**

ಪಾಲಕರು ತಮ್ಮ ಮಕ್ಕಳಿಗೆ ಆಂಗ್ಲ ಭಾಷೆಯಲ್ಲಿ ಶಿಕ್ಷಣ ಕೊಡಿಸಲು ಮುಂದಾಗಿರುವುದರಿಂದ ಸರ್ಕಾರಿ ಶಾಲೆಗಳಲ್ಲಿ ಮಕ್ಕಳ ಸಂಖ್ಯೆ ಕಡಿಮೆಯಾಗುತ್ತಿದೆ. ಇದನ್ನು ಗಮನಿಸಿ, ಸರ್ಕಾರದಿಂದಲೇ 0–12ನೇ ತರಗತಿಯವರೆಗೆ ಆಂಗ್ಲ ಭಾಷೆಯಲ್ಲಿ ಶಿಕ್ಷಣ ನೀಡಲು ಪಬ್ಲಿಕ್ ಶಾಲೆಗಳನ್ನು ಪ್ರಾರಂಭಿಸಲಾಗುತ್ತಿದೆ. ಮಾನ್ವಿ ತಾಲೂಕಿನಲ್ಲಿ ಪಬ್ಲಿಕ್ ಶಾಲೆಗಳ ಪ್ರಾರಂಭಕ್ಕಾಗಿ 3 ಪ್ರದೇಶಗಳನ್ನು(2ನೇಪುಟಕ್ಕೆ)

---

### ಅದ್ದೂರಿಯಾಗಿ ನಡೆದ ಪದಗ್ರಹಣ ಸಮಾರಂಭ

## ದೇಶದ ಅಭಿವೃದ್ಧಿ ಬಗ್ಗೆ ಚಿಂತನೆ ಮಾಡುವ ಕಾಂಗ್ರೆಸ್ ಪಕ್ಷ : ಅಮರೇಗೌಡ ಪಾಟೀಲ್ ಬಯ್ಯಾಪೂರ



**ಯುವಮಾರ್ಗ ಸುದ್ದಿ**

**ಲಿಂಗಸುಗೂರು,ನ.29–** ಬ್ರಿಟಿಷರ ಗುಲಾಮಗಿರಿ, ಕಪಿಮುಷ್ಠಿಯಲ್ಲಿ ಪರತಂತ್ರವಾಗಿದ್ದ ಭಾರತ ದೇಶವನ್ನು ಸ್ವತಂತ್ರಗೊಳಿಸಿ ದೇಶಕ್ಕೆ ಜೀವ ಮತ್ತು ಜೀವನ ಕೊಟ್ಟದ್ದು ಕಾಂಗ್ರೆಸ್ ಪಕ್ಷ ಎಂದು ಮಾಜಿ ಸಚಿವ ಹಾಗೂ ಕೊಪ್ಪಳ ಜಿಲ್ಲಾ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಅಮರೇಗೌಡ ಪಾಟೀಲ್ ಬಯ್ಯಾಪೂರ ಹೇಳಿದರು.

ಲಿಂಗಸುಗೂರು ವಿಧಾನಸಭಾ ಕ್ಷೇತ್ರದ ತಾಲೂಕು ಕಾಂಗ್ರೆಸ್ ಸಮಿತಿಯಿಂದ ಪಟ್ಟಣದ ಈಶ್ವರ ದೇವಸ್ಥಾನದಲ್ಲಿ ಹಮ್ಮಿಕೊಂಡಿದ್ದ ನಾನಾ ವಿಭಾಗಗಳಿಗೆ ಆಯ್ಕೆಯಾದ ನೂತನ ಪದಾಧಿಕಾರಿಗಳ ಪದಗ್ರಹಣ ಹಾಗೂ ಸ್ಥಳೀಯ ಸಂಸ್ಥೆಗಳ ಚುನಾವಣೆ ಪೂರ್ವಭಾವಿ ಸಭೆಯನ್ನು ಉದ್ಘಾಟಿಸಿ ಮಾತನಾಡಿದ ಅವರು. ಶಿಕ್ಷಣ ತಂತ್ರಜ್ಞಾನ ಕೃಷಿ ಅಭಿವೃದ್ಧಿಗೆ ಒತ್ತು ನೀಡಿದ್ದು ಮಾಜಿ ಪ್ರಧಾನಿ ರಾಜೀವ್ ಗಾಂಧಿಯವರು. ಯುವಕರು ದೇಶದ ಇತಿಹಾಸ ತಿಳಿದುಕೊಳ್ಳಬೇಕು. ಆಚ್ಚೇದಿನ ಆಯೆಂಗೆ ಸಬ್‌ಕಾ ಸಾಥ್ ಸಬ್‌ಕಾ ವಿಕಾಸ್ ಎನ್ನುವುದು ಬಿಜೆಪಿಯವರ ಜನರನ್ನು ಪೆದ್ದು ಮಾಡುವ ಮಾತುಗಳು. ತತ್ವ ಸಿದ್ಧಾಂತಗಳನ್ನು ಮೈಗೂಡಿಸಿಕೊಂಡು ಬಂದಿರುವ ಕಾಂಗ್ರೆಸ್ ಪಕ್ಷ ರಾಜ್ಯ ದೇಶದ ಅಭಿವೃದ್ಧಿಗೆ ಕಾರಣ ಎಂದರು.

**ವ್ಯಕ್ತಿ ಮುಖ್ಯವಲ್ಲ ಪಕ್ಷ ಮುಖ್ಯ ;** ನಮಗೆ ವ್ಯಕ್ತಿ ಮುಖ್ಯವಲ್ಲ ಪಕ್ಷ ಮುಖ್ಯ. ಲಿಂಗಸುಗೂರು ಕ್ಷೇತ್ರದಲ್ಲಿ ಬರುವ ವಿಧಾನಸಭಾ ಚುನಾವಣೆಗೆ ಸ್ಪರ್ಧಿಸುವ ವರನ್ನು ಗೆಲ್ಲಿಸಿ ರಾಜ್ಯದಲ್ಲಿ ಸಿದ್ಧರಾಮಯ್ಯ ಡಿಕೆಶಿಯವರ ಕೈ ಬಲವಡಿಸಲು ನಾವು ಸದಾ ಸನ್ನದ್ಧರಾಗಿರುತ್ತೇವೆ. ಜನಪರ ಆಡಳಿತ ನೀಡಿದ ಕಾಂಗ್ರೆಸ್ ಪಕ್ಷದ ಅಭಿವೃದ್ಧಿಪರ ಕಾರ್ಯಗಳನ್ನು ಸಹಿಸದೇ ಬಿಜೆಪಿಯವರು ಹೊಟ್ಟೆ ಕಿಚ್ಚು ಪಡುತ್ತಿದ್ದಾರೆ. ದೇವರು ಅಧ್ಯಾತ್ಮ ಮನಸ್ಸಿನ ಶಾಂತಿಗಾಗಿ ಮಾಡಬೇಕೆ ಹೊರತು. ಜಾತಿಗಳ ಮಧ್ಯೆ ಸಂಘರ್ಷ ಹಚ್ಚಿ ಅದರಲ್ಲಿ ತಮ್ಮ ಬೇಳೆ ಬೇಯಿಸಿಕೊಳ್ಳುವ ಕೆಲಸ ಬಿಜೆಪಿಯವರು ಮಾಡುತ್ತಿದ್ದಾರೆ. ಕೇಂದ್ರದಲ್ಲಿ ಅಧಿಕಾರಕ್ಕೆ ಬಂದ 11 ವರ್ಷಗಳಲ್ಲಿ ಒಂದು ಡ್ಯಾಂ ಕಟ್ಟಿಲ್ಲ. ರೈತರಿಗೆ ಅನುಕೂಲ ಆಗುವ ಜನಸಾಮಾನ್ಯರ ಜೀವನ ಮಟ್ಟ ಸುಧಾರಣೆ ಮಾಡುವ ನಿಟ್ಟಿನಲ್ಲಿ ಕೆಲಸಗಳು ಆಗಿಲ್ಲ. ಎಂದು ಕೇಂದ್ರ ಸರಕಾರದ ಕಾರ್ಯವೈಖರಿಗಳನ್ನು ಟೀಕಿಸಿದರು.


ಪ್ರಾಸ್ತಾವಿಕವಾಗಿ ಜಿಲ್ಲಾ ಗ್ಯಾರಂಟಿ ಯೋಜನೆಯ ಅಧ್ಯಕ್ಷ ಪಾಮಯ್ಯ ಮುರಾರಿ ಮಾತನಾಡಿ, 2023ರ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ಗೆಲುವು ಸಾಧಿಸಿ ಸಾಕಷ್ಟು ಬಡ ಜನರಿಗೆ ಅನುಕೂಲ ಮಾಡಿಕೊಡಲಾಗುತ್ತದೆ, ಗ್ರಾಮೀಣ ಜನರಿಗೆ ಹಾಗೂ ಬಡ ಮಹಿಳೆಯರಿಗೆ ಕಾಂಗ್ರೆಸ್ ಪಕ್ಷ ಯೋಜನೆ ಜಾರಿಗೆ ತಂದಿದೆ, ಬಿಜೆಪಿ ಸುಳ್ಳು ಪ್ರಚಾರ ಮಾಡುತ್ತದೆ ಅದನ್ನು ನಮ್ಮ ಕಾರ್ಯಕರ್ತರು ಹೆದರಿಗುದ್ದದೆ ಪಕ್ಷವು ಬೆಳಸಬೇಕು ಎಂದರು.

ಸಣ್ಣ ಸಣ್ಣ ಕಾರ್ಯಕರ್ತರಿಗೆ ಕಾಂಗ್ರೆಸ್ ಪಕ್ಷ ಅವರನ್ನು ಗುರುತಿಸಿ ಅವರಿಗೆ ಸ್ಥಾನಮಾನ ಕೊಟ್ಟಿದೆ, ಮಾಜಿ ಸಚಿವ ಅಮರೇಗೌಡ ಪಾಟೀಲ್ ಬಯ್ಯಾಪೂರ ಅವರು ಬಡ ಜನರ ಚಿಂತಕರು, ನೀರಾವರಿ ಹರಿಕಾರರು ಎಂದರು.

ಈ ಸಂದರ್ಭದಲ್ಲಿ ಹಿಂದುಳಿದ ವರ್ಗಗಳ ಜಿಲಾಧ್ಯಕ್ಷ ಮುರಳಿ ಯಾದವ್, ರಾಜ್ಯ ಯೋಜನಾ ಆಯೋಗದ ಸದಸ್ಯ ರಜಾಕ್ ಉಸ್ತಾದ್, (2ನೇಪುಟಕ್ಕೆ..)

---

## ಸೈಬರ್ ವಂಚನೆ ತಡೆಗೆ ಸರ್ಕಾರದ ತುರ್ತು ಹಸ್ತಕ್ಷೇಪಕ್ಕೆ 'ಸೋಲಿಡಾರಿಟಿ ಯೂತ್ ಮೂವ್ಮೆಂಟ್' ಮನವಿ!



**ಯುವಮಾರ್ಗ ಸುದ್ದಿ**

**ಮಾನ್ವಿ,ನ.29–** ಕರ್ನಾಟಕ ರಾಜ್ಯದಲ್ಲಿ ದಿನೇ ದಿನೇ ಹೆಚ್ಚುತ್ತಿರುವ ಸೈಬರ್ ವಂಚನೆ ಮತ್ತು ಡಿಜಿಟಲ್ ಅಪರಾಧಗಳ ಸರಣಿಯಿಂದ ಸಾಮಾನ್ಯ ನಾಗರಿಕರು ದೊಡ್ಡ ಪ್ರಮಾಣದಲ್ಲಿ ಆರ್ಥಿಕ, ಸಾಮಾಜಿಕ ಮತ್ತು ಮಾನಸಿಕ ಹಾನಿಗೆ ಒಳಗಾಗುತ್ತಿರುವ ಹಿನ್ನೆಲೆಯಲ್ಲಿ, ಸೋಲಿಡಾರಿಟಿ ಯೂತ್ ಮೂವ್ಮೆಂಟ್ ಕರ್ನಾಟಕ ವತಿಯಿಂದ ತಹಶೀಲ್ದಾರ್ ಮೂಲಕ ರಾಜ್ಯ ಸರ್ಕಾರದ ಮುಖ್ಯಮಂತ್ರಿ ತುರ್ತು ಕ್ರಮ ಕೈಗೊಳ್ಳುವಂತೆ ಮನವಿ ಸಲ್ಲಿಸಲಾಯಿತು.

ಕರ್ನಾಟಕದ ಸೈಬರ್ ಅಪರಾಧಗಳ ಗಂಭೀರತೆ, ದಾಖಲಾದ ಪ್ರಕರಣಗಳ ಸಂಖ್ಯೆ, ಜನರು ಕಳೆದುಕೊಂಡಿರುವ ಹಣದ ಮೊತ್ತ ಹಾಗೂ ವಂಚಕರ ಬಂಧನದ ಅತ್ಯಂತ ಕಡಿಮೆ ಪ್ರಮಾಣದ ಕುರಿತು ಸರ್ಕಾರದ ಅಧಿಕೃತ ಅಂಕಿಅಂಶಗಳನ್ನು ಉಲ್ಲೇಖಿಸಲಾಗಿದೆ. ಈ ಅಂಕಿಅಂಶಗಳ ಪ್ರಕಾರ, ರಾಜ್ಯದಲ್ಲಿನ ಪರಿಸ್ಥಿತಿಯು ತುರ್ತು ಹಸ್ತಕ್ಷೇಪಕ್ಕೆ ಅರ್ಹವಾಗಿರುವ ಗಂಭೀರ ಹಂತ ತಲುಪಿದೆ ಎಂದು ಸಂಸ್ಥೆಯು ಒತ್ತಿ ಹೇಳಿದೆ.

ಸಂಸ್ಥೆಯ ಪ್ರಕಾರ, ದಾಖಲಾಗಿರುವ ಪ್ರಕರಣಗಳಿಗಿಂತ ಹೊರಗೆ ಹಲವು ಪ್ರಕರಣಗಳು ದೂರು ದಾಖಲಿಸದೇ ಉಳಿಯುತ್ತಿದ್ದು, ನಿಜವಾದ ನಷ್ಟದ ಪ್ರಮಾಣ ಹಲವು ಪಟ್ಟು ಹೆಚ್ಚಾಗಿದೆ. ಬ್ಯಾಂಕ್ ಖಾತೆಗಳನ್ನು ಖಾಲಿ ಮಾಡುವ, ವೈಯಕ್ತಿಕ ಮಾಹಿತಿ ದುರುಪಯೋಗ ಮಾಡುವ ಮತ್ತು ಸಾಮಾಜಿಕ ಅಶಾಂತಿ ಸೃಷ್ಟಿಸುವ ಈ ಅಪರಾಧಗಳು ಹೆಚ್ಚುತ್ತಿದ್ದು, ಅನೇಕ ನಾಗರಿಕರು ಆತ್ಮಹತ್ಯೆಗೆ ಸಹ ಮೊರೆ ಹೋಗುತ್ತಿರುವುದು ಅತ್ಯಂತ ಕಳವಳಕಾರಿ ಸಂಗತಿ ಎಂದು ಹೇಳಿದೆ.

**ಪ್ರಮುಖ ಬೇಡಿಕೆಗಳು:**ಸೋಲಿಡಾರಿಟಿ ಯೂತ್ ಮೂವ್ಮೆಂಟ್ ರಾಜ್ಯ ಸರ್ಕಾರದ ಮುಂದೆ ಇರಿಸಿರುವ ಪ್ರಮುಖ ಬೇಡಿಕೆಗಳು ಏನೆಂದರೆ (2ನೇಪುಟಕ್ಕೆ..)

---

## ಕೋನಾಪುರ ಪೇಟೆ ಪ್ರೌಢ ಶಾಲೆಯಲ್ಲಿ ಉಚಿತ ಯೋಗ ಕಾರ್ಯಾಗಾರ

**ಯುವಮಾರ್ಗ ಸುದ್ದಿ**



**ಮಾನ್ವಿ,ನ.29–** ಯೋಗ ಸನ್ನಿದಿ ಜ್ಞಾನ ವಿದ್ಯಾಪೀಠ ಟ್ರಸ್ಟ್(ರಿ) ವತಿಯಿಂದ ಕೋನಾಪುರ ಪೇಟೆ ಪ್ರೌಢ ಶಾಲೆಯಲ್ಲಿ ಶಾಲಾ ಮಕ್ಕಳಿಗಾಗಿ ಒಂದು ದಿನದ ಯೋಗ ಕಾರ್ಯಾಗಾರವನ್ನು ಹಮ್ಮಿಕೊಳ್ಳಲಾಯಿತು.

ಕಾರ್ಯಕ್ರಮವನ್ನು ಮುನ್ನಡೆಸಿದ ಯೋಗಗುರು ಅನ್ನದಾನಯ್ಯ ಅವರು ತ್ರಿಕೋಣಾಸನ, ಪರಿವೃತ್ತ ತ್ರಿಕೋಣಾಸನ, ಗೋಮುಖಾಸನ, ಜಾನುಶಿರಶಾಸನ, ವೃಕ್ಷಾಸನ, ಪಾದಹಸ್ತಾಸನ ಸೇರಿದಂತೆ ಹಲವು ಯೋಗಾಸನಗಳನ್ನು ವಿದ್ಯಾರ್ಥಿಗಳಿಗೆ ಅಭ್ಯಾಸ ಮಾಡಿಸಿದರು. ಜೊತೆಗೆ ನಾಡೀ ಶುದ್ಧಿ ಪ್ರಾಣಾಯಾಮ, ಬ್ರಹ್ಮರಿ ಪ್ರಾಣಾಯಾಮ ಹಾಗೂ ಮುದ್ರೆಗಳ ವೈಜ್ಞಾನಿಕ ಮಹತ್ವವನ್ನು ವಿವರಿಸಿದರು.

ಕಾರ್ಯಕ್ರಮದ ಕೊನೆಯಲ್ಲಿ ಸಭೆಯನ್ನು ಉದ್ದೇಶಿಸಿ ಮಾತನಾಡಿದ ಮುಖ್ಯ ಗುರು ವಿರುಪಾಕ್ಷಪ್ಪ ಅವರು, ಕಳೆದ ಹತ್ತು ವರ್ಷಗಳಿಂದ ಮಾನ್ವಿ ನಗರದಲ್ಲಿನ ಸರ್ಕಾರಿ ಶಾಲೆಗಳಲ್ಲಿ ಉಚಿತವಾಗಿ ಯೋಗ ಸೇವೆ ನೀಡುತ್ತಾ ಬಂದಿರುವ ಯೋಗ ಗುರು ಅನ್ನದಾನಯ್ಯ ಅವರ ಸೇವೆ ಶ್ಲಾಘನೀಯವಾಗಿದೆ ಎಂದು ಪ್ರಶಂಸಿಸಿದರು.

ನಂತರ ಶಾಲಾವತಿಯಿಂದ ಯೋಗ ಗುರು ಅನ್ನದಾನಯ್ಯ ಅವರಿಗೆ ಸನ್ಮಾನಿಸಲಾಯಿತು.

ಈ ಸಂದರ್ಭದಲ್ಲಿ ಶಾಲಾ ಸಹ ಶಿಕ್ಷಕರಾದ ವಿಜಯಕುಮಾರ್ ಸಂಜೀವಪ್ಪ, ರಘುನಂದನ್ ರಾಮಸ್ವಾಮಿ, ಪೈಮುದ್ದೀನ್, ಅತಿಥಿ ಶಿಕ್ಷಕರಾದ ನವೀನ್ ಹಾಗೂ ಶಾಲಾ ಮಕ್ಕಳು ಉಪಸ್ಥಿತರಿದ್ದರು.

# ಮೊದಲನೇಯ ಪುಟದಿಂದ

## ಕುರ್ಚಿ ಕಾಳಗಕ್ಕೆ ವಿರಾಮ : ಹೈಕಮಾಂಡ್ ತೀರ್ಮಾನವೇ ಅಂತಿಮ

ಮುಖ್ಯಮಂತ್ರಿಗಳು ಹೇಳಿದರು. ಉಪಹಾರ ಸಭೆಯಲ್ಲಿ ನಾನು ಶಿವಕುಮಾರ್ ನಮ್ಮ ಕಾನೂನು ಸಲಹೆಗಾರ ಪೊನ್ನಣ್ಣ ಸೇರಿ ತಿಂಡಿ ತಿಂದ್ದೇವೆ. ತಿಂಡಿ ಚೆನ್ನಾಗಿತ್ತು. ಉಪಹಾರ ಸಭೆಯಲ್ಲಿ ನಾವು ಏನೂ ಮಾತನಾಡಿಲ್ಲ. ಪಕ್ಷದ ವರಿಷ್ಠರನ್ನು ವೇಣುಗೋಪಾಲ್ ಅವರು ನಿನ್ನೆ ಪೊನ್ನಣ್ಣ ಅವರಿಗೆ ಕರೆ ಮಾಡಿ ಡಿ.ಕೆ. ಶಿವಕುಮಾರ್ ಅವರನ್ನು ಉಪಹಾರಕ್ಕೆ ಕರೆಯಲು ಸೂಚಿಸಿದ್ದರು. ಶಿವಕುಮಾರ್ ಅವರಿಗೂ ಕರೆ ಮಾಡಿ ಇದನ್ನೆ ತಿಳಿಸಿದ್ದರು. ನಾನು ಡಿಕೆಶಿ ಅವರಿಗೆ ನಮ್ಮ ಡಿ.ಕೆ. ಶಿವಕುಮಾರ್ ತಮ್ಮ ಮನೆಗೆ ಊಟಕ್ಕೆ ಬರುವಂತೆ ಆಹ್ವಾನ ನೀಡಿದ್ದರು. ನಾನು ಮತ್ತೊಂದು ದಿನ ಊಟಕ್ಕೆ ಬರುತ್ತೇನೆ ನಮ್ಮ ಮನೆಗೆ ಉಪಹಾರಕ್ಕೆ ಬನ್ನಿ ಎಂದು ಕರೆದಿದ್ದೆ ಅದರಂತೆ ನಮ್ಮ ಮನೆಯಲ್ಲೇ ಉಪಹಾರ ಸೇವಿಸಿದ್ದೇವೆ ಎಂದರು.

ಡಿಕೆಶಿ ಮಾತುಮುಖ್ಯಮಂತ್ರಿಗಳ ನಂತರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ನಾನು ಮುಖ್ಯಮಂತ್ರಿ ಸಿದ್ಧರಾಮಯ್ಯ ಮಾತನಾಡಿದ್ದೇವೆ. ಹೈಕಮಾಂಡ್ ತೀರ್ಮಾನದಂತೆ ನಾವಿಬ್ಬರು ನಡೆಯುತ್ತೇವೆ, ಕೆಲಸ ಮಾಡುತ್ತೇವೆ ಎಂದರುನಾಯಕತ್ವ ವಿಚಾರದಲ್ಲಿ ನನ್ನದು ಹಾಗೂ ಸಿದ್ಧರಾಮಯ್ಯ ಅವರದು ಒಂದೇ ನಿಲುವಾಗಿದೆ. ಪಕ್ಷದ ವರಿಷ್ಠರು ಹೇಳಿದಂತೆ ನಡೆಯುತ್ತೇವೆ ಎಂದರುಕಾಂಗ್ರೆಸ್‌ನಲ್ಲಿ ಯಾವುದೇ ಬಣಗಳಿಲ್ಲ. ಇಲ್ಲಿ ಇರುವುದು ಕಾಂಗ್ರೆಸ್ ಬಣ ಮಾತ್ರ ಎಂದು ಅವರು ಹೇಳಿದರು.ನಾವು ಪಕ್ಷದ ನಿಷ್ಠಾವಂತ ಕಾರ್ಯಕರ್ತರು. ಪ್ರಸ್ತುತ ಪರಿಸ್ಥಿತಿಯಲ್ಲಿ ರಾಷ್ಟ್ರ ಮಟ್ಟದಲ್ಲಿ ಪಕ್ಷ ಕಷ್ಟದ ಸಮಯದಲ್ಲಿದೆ. ಈ ಸಂದರ್ಭದಲ್ಲಿ ಕರ್ನಾಟಕ ಮಹತ್ತರ ಪಾತ್ರ ವಹಿಸಲಿದೆ.

2028ರ ವಿಧಾನಸಭಾ ಚುನಾವಣೆ ನಂತರ 2029ರ ಲೋಕಸಭಾ ಚುನಾವಣೆಯನ್ನು ಎಐಸಿಸಿ ಅಧ್ಯಕ್ಷರಾದ ಮಲ್ಲಿಕಾರ್ಜುನಖರ್ಗೆ, ರಾಹುಲ್‌ಗಾಂಧಿ ಅವರ ನಾಯಕತ್ವದಲ್ಲಿ ಎದರಿಸುತ್ತೇವೆ. ರಾಜ್ಯದಲ್ಲಿ 2028 ಹಾಗೂ 2029 ರಲ್ಲಿ ರಾಷ್ಟದಲ್ಲಿ ಪಕ್ಷವನ್ನು ಅಧಿಕಾರಕ್ಕೆ ತರುವುದೇ ನಮ್ಮ ಗುರಿ. ಇಷ್ಟು ದಿನ ಒಗ್ಗಟ್ಟಿನಿಂದ ಕೆಲಸ ಮಾಡಿಕೊಂಡು ಹೋಗುತ್ತಿದ್ದು, ಮುಂದೆಯೂ ಅದೇ ರೀತಿ ಕೆಲಸ ಮಾಡುವ ಅಚಲ ನಿರ್ಧಾರ ಕೈಗೊಂಡಿದ್ದೇವೆ ಎಂದರು.ನಮ್ಮಲ್ಲಿ ಯಾವುದೇ ಗುಂಪಿಲ್ಲ. ಇಡೀ ಕಾಂಗ್ರೆಸ್ ಒಂದೇ ಗುಂಪು. ಎಸ್.ಎಂ.ಕೃಷ್ಣ ಅವರು ಮುಖ್ಯಮಂತ್ರಿ ಆಗಿದ್ದಾಗಲೂ ಗುಂಪುಗಾರಿಕೆ ಮಾಡಿಲ್ಲ. ಇವತ್ತಿಗೂ ಅವಕಾಶ ಕೊಟ್ಟಿಲ್ಲ. ಸಿದ್ಧರಾಮಯ್ಯ ಅವರು ಮೊದಲ ಅವಧಿಯಲ್ಲಿ ಮೊದಲ ಆರು ತಿಂಗಳು ನನ್ನನ್ನು ಮಂತ್ರಿ ಮಾಡದೇ ಇದ್ದಾಗಲೂ ನಾನು ಒಂದೇ ಒಂದು ವಿರೋಧದ ಮಾತನ್ನು ಆಡಿಲ್ಲ. ಒಟ್ಟಾಗಿ ಕೆಲಸ ಮಾಡುವ ನನ್ನ ನಿರ್ಧಾರ ಅಚಲ, ಹೈಕಮಾಂಡ್ ಹೇಳಿದಂತೆ ನಾವಿಬ್ಬರೂ ಕೆಲಸ ಮಾಡಿಕೊಂಡು ಹೋಗುತ್ತೇವೆ ಎಂದು ಪುನರುಚ್ಛರಿಸಿದರು

ಎಲ್ಲರನ್ನು ಒಟ್ಟಾಗಿ ತೆಗೆದುಕೊಂಡು ಪ್ರತಿಯೊಬ್ಬ ಶಾಸಕರಿಗ ಶಕ್ತಿ ತುಂಬಿ ಪಕ್ಷವನ್ನು ಬಲಿಷ್ಠವಾಗಿ ಕಟ್ಟುವುದು ನಮ್ಮಿಬ್ಬರ ಕರ್ತವ್ಯ. 2028ಕ್ಕೆ ಮತ್ತೆ ಕಾಂಗ್ರೆಸ್ ಸರ್ಕಾರವನ್ನು ಅಧಿಕಾರಕ್ಕೆ ತರಲು ಅನೇಕ ಕಾರ್ಯಕ್ರಮಗಳನ್ನು ರೂಪಿಸಿದ್ದು, ಅದಕ್ಕೆ ತಕ್ಕಂತೆ ಕೆಲಸ ಮಾಡುತ್ತಿದ್ದೇವೆ. ಮುಖ್ಯಮಂತ್ರಿಗಳು ನೀಡಿರುವ ಸಂದೇಶಕ್ಕೆ ನನ್ನ ಸಹಮತವಿದೆ ಎಂದರು.ದೆಹಲಿಗೆ ಭೇಟಿ ನೀಡುವಿರಾ ಎಂಬ ಪ್ರಶ್ನೆಗೆ, ಪಕ್ಷದ ವರಿಷ್ಠರು ಕರೆದರೆ ನಾವು ಖಂಡಿತವಾಗಿ ಹೋಗುತ್ತೇವೆ.

ಅದರ ಹೊರತಾಗಿ ಮೆಕ್ಕೆಜೋಳ, ಕಬ್ಬು ದರ ನಿಗದಿ, ಮೇಕೆದಾಟು ಯೋಜನೆ ಸೇರಿದಂತೆ ನೀರಾವರಿ ಯೋಜನೆಗೆ ಸಂಬಂಧಿಸಿದಂತೆ ರಾಜ್ಯದ ಸಂಸತ್ ಸದಸ್ಯರು ಅಧಿವೇಶನದಲ್ಲಿ ಧ್ವನಿ ಎತ್ತಬೇಕಾಗಿದೆ. ಈ ವಿಚಾರದಲ್ಲಿ ಸಂಸದರ ಜತೆ ಚರ್ಚೆ ನಡೆಸಬೇಕಿದೆ. ಕೇಂದ್ರದ ಮೇಲೆ ಒತ್ತಡ ಹಾಕುವ ಕೆಲಸ ಮಾಡಬೇಕು. ಕೇಂದ್ರ ಸಚಿವರು ನಿಯೋಗದಲ್ಲಿ ಬನ್ನಿ ಎಂದು ಹೇಳಿದ್ದು ನಾವು ಆ ಕೆಲಸ ಮಾಡುತ್ತೇವೆ ಎಂದರು.

## ದೇಶದ ಅಭಿವೃದ್ಧಿ ಬಗ್ಗೆ ಚಿಂತನೆ ಮಾಡುವ ಕಾಂಗ್ರೆಸ್ ಪಕ್ಷ : ಅಮರೇಗೌಡ ಪಾಟೀಲ್ ಬಯ್ಯಾಪೂರ

ಎಸ್‌ಟಿ ಪಿಭಾಗದ ಜಿಲ್ಲಾಧ್ಯಕ್ಷ ಮಲ್ಲಿಕಾರ್ಜುನ ನಾಯಕ, ಮುಖಂಡರಾದ ಗುಂಡಪ್ಪ ನಾಯಕ, ಅನಿಸ್ ಪಾಷಾ, ಅದಪ್ಪ ಮನಗೂಳಿ. ಸೋಮಶೇಖರ ಐದನಾಳ, ಜಗದಿ ನಗೌಡ, ಪ್ರಕಾಶ ಕುರಿ, ಶಶಿಧರ ಪಾಟೀಲ್, ಲಾಲಪ್ಪ ರಾಠೋಡ್, ಚೆನ್ನಾರೆಡ್ಡಿ ಬಿರಾದಾರ, ಮಲ್ಲಯ್ಯ ಸೇರಿ ಇತರರಿದ್ದರು.

## ಸೈಬರ್ ವಂಚನೆ ತಡೆಗೆ ಸರ್ಕಾರದ ತುರ್ತು ಹಸ್ತಕ್ಷೇಪಕ್ಕೆ 'ಸೋಲಿಡಾರಿಟಿ ಯೂತ್ ಮೂವ್ಮೆಂಟ್' ಮನವಿ!

ಡಿಸೆಂಬರ್ 8, 2025 ರಂದು ಆರಂಭವಾಗುವ ಚಳಿಗಾಲದ ಅಧಿವೇಶನದಲ್ಲಿ ಸೈಬರ್ ವಂಚನೆ ವಿಷಯವನ್ನು ಮುಖ್ಯ ಚರ್ಚಾ ವಿಷಯವಾಗಿ ಸೇರಿಸಿ ಕಠಿಣ ಹಾಗೂ ಸ್ಪಷ್ಟ ನೀತಿಯನ್ನು ರೂಪಿಸಬೇಕು. ಇದರ ಜೊತೆಗೆ, ವಂಚನೆಗೆ ಒಳಗಾದ ನಾಗರಿಕರ ಹಣದ ಭದ್ರತೆಗೆ ಸರ್ಕಾರವೇ ಖಾತರಿ ನೀಡುವ ರಕ್ಷಣಾ ಕ್ರಮಗಳನ್ನು ತುರ್ತಾಗಿ ರೂಪಿಸಬೇಕು. ಹಾಗೆಯೇ, ರಾಜ್ಯ ಮಟ್ಟದ ಸ್ವತಂತ್ರ ಸೈಬರ್ ಸಹಾಯವಾಣಿ ಸಂಖ್ಯೆಯನ್ನು ತಕ್ಷಣ ಸ್ಥಾಪಿಸಬೇಕು ಮತ್ತು ಯುವಕರು ಹಾಗೂ ನಾಗರಿಕರಿಗೆ ಸೈಬರ್ ಸುರಕ್ಷತೆ, ಹ್ಯಾಕಿಂಗ್ ತಡೆ ಹಾಗೂ ಜಾಗೃತಿ ಕಾರ್ಯಕ್ರಮಗಳನ್ನು ವ್ಯಾಪಕವಾಗಿ ಜಾರಿಗೆ ತರಬೇಕು ಎಂಬುದು ಇನ್ನೊಂದು ಪ್ರಮುಖ ಬೇಡಿಕೆಯಾಗಿದೆ. ಅಂತಿಮವಾಗಿ, ಸೋಲಿಡಾರಿಟಿ ಯೂತ್ ಮೂವ್ಮೆಂಟ್ ಕರ್ನಾಟಕವು ಸಲ್ಲಿಸಲಿರುವ ತಾಂತ್ರಿಕ ಶಿಫಾರಸ್ಸುಗಳು ಮತ್ತು ನೀತಿ ಸಲಹೆಗಳನ್ನು ಸರ್ಕಾರವು ಗಂಭೀರವಾಗಿ ಪರಿಗಣಿಸಿ ಅನುಷ್ಠಾನಗೊಳಿಸಬೇಕು ಎಂದೂ ಸಹ ಮನವಿ ಮಾಡಿದೆ.

ಸೈಬರ್ ಅಪರಾಧ ತಡೆಯುವುದು ಕೇವಲ ಕಾನೂನು ಮತ್ತು ತಾಂತ್ರಿಕ ಸವಾಲು ಮಾತ್ರವಲ್ಲ, ಜನರ ಹಣ, ಬದುಕು ಮತ್ತು ಭವಿಷ್ಯವನ್ನು ರಕ್ಷಿಸುವ ಸಾಮಾಜಿಕ ಜವಾಬ್ದಾರಿಯೂ ಆಗಿದೆ ಎಂದು ಸಂಸ್ಥೆ ಹೇಳಿದೆ.

ಮುಂದಿನ ದಿನಗಳಲ್ಲಿ ರಾಜ್ಯದಾದ್ಯಂತ ಡಿಜಿಟಲ್ ಸುರಕ್ಷತೆ ಕುರಿತು ಜಾಗೃತಿ ಅಭಿಯಾನಗಳನ್ನು ಹಮ್ಮಿಕೊಳ್ಳುವುದಾಗಿ ಸೋಲಿಡಾರಿಟಿ ಯೂತ್ ಮೂವ್ಮೆಂಟ್ ಕರ್ನಾಟಕ ತಿಳಿಸಿದ್ದು, ಸರ್ಕಾರದೊಂದಿಗೆ ಸಹಕಾರದಿಂದ ಪರಿಣಾಮಕಾರಿ ಪರಿಹಾರ ಕಂಡುಕೊಳ್ಳುವ ಬದ್ಧತೆಯನ್ನು ವ್ಯಕ್ತಪಡಿಸಿದೆ.

ಈ ಸಂದರ್ಭದಲ್ಲಿ ತಾಲೂಕಾಧ್ಯಕ್ಷರಾದ ನಾಸಿರ್ ಅಲಿ, ಕಾರ್ಯದರ್ಶಿಗಳಾದ ಮಹಮ್ಮದ್ ಹಾರೂನ್ ,ಖಜಾಂಚಿ ಗಫ್ಫರ್ ಖಾನ್ ಮೊಹಮ್ಮದ್ ಕೆ.ಎಂ.ಭಾಷಾ ಶೇಕ್ ಇಸಾಕ್ ಮೊಹಮ್ಮದ್ ಸೈಫ್ ಇನ್ನಿತರ ಕಾರ್ಯಕರ್ತರು ಉಪಸ್ಥಿತರಿದ್ದರು

## ಕಲ್ಯಾಣ ಕರ್ನಾಟಕ ಭಾಗದ ಅಭಿವೃದ್ಧಿಗೆ ವಾರ್ಷಿಕ 5 ಸಾವಿರ ಕೋಟಿ ಅನುದಾನ: ಸಚಿವ ಬೋಸರಾಜು

ಗುರುತಿಸಲಾಗಿದೆ ಎಂದು ಮಾಹಿತಿ ನೀಡಿದರು. **ಉತ್ತಮ ಶಿಕ್ಷಕರಿಗೆ ಚಿನ್ನದ ಪದಕ :**ಖಾಸಗಿ ಶಾಲಾ ಶಿಕ್ಷಕರನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಸಚಿವರು ವೈಯಕ್ತಿಕವಾಗಿ ಉತ್ತಮ ಸೇವೆ ಸಲ್ಲಿಸಿದ ನಾಲ್ವರು ಶಿಕ್ಷಕರಿಗೆ ತಲಾ 5 ಗ್ರಾಂ ಚಿನ್ನದ ಪದಕಗಳನ್ನು ಪ್ರದಾನ ಮಾಡಿದರು. ಮುಂದಿನ ವರ್ಷದಿಂದ ಇದನ್ನು ತಲಾ 10 ಗ್ರಾಂ ಚಿನ್ನದ ಪದಕವಾಗಿ ಹೆಚ್ಚಿಸಲಾಗುವುದು ಎಂದು ಘೋಷಿಸಿದರು.ಮಾನ್ವಿ ಶಾಸಕ ಹಂಪಯ್ಯನಾಯಕ ಮಾತನಾಡಿ, "ಖಾಸಗಿ ಶಾಲೆಯ ಶಿಕ್ಷಕರು ಮಕ್ಕಳಿಗೆ ಉತ್ತಮ ಶಿಕ್ಷಣ ಮತ್ತು ಸಂಸ್ಕಾರ ನೀಡುವ ಮೂಲಕ ಅವರ ಉನ್ನತ ಜೀವನ ರೂಪಿಸುವಲ್ಲಿ ಮಹತ್ತರ ಪಾತ್ರ ವಹಿಸುತ್ತಾರೆ," ಎಂದರು. ಮಾಜಿ ಶಾಸಕ ರಾಜಾ ವೆಂಕಟಪ್ಪ ನಾಯಕ ಸಹ ಮಾತನಾಡಿದರು.

**ಪ್ರಶಸ್ತಿ ಪುರಸ್ಕೃತರು :**ಸಮಾರಂಭದಲ್ಲಿ ತಾಲೂಕಿನ ವಿವಿಧ ಖಾಸಗಿ ಶಾಲೆಗಳ ಶಿಕ್ಷಕರನ್ನು ಸನ್ಮಾನಿಸಿ ಗೌರವಿಸಲಾಯಿತು. ಶಾಸಕರ ಚಿನ್ನದ ಪದಕ ವಿಜೇತ ಶಿಕ್ಷಕರಾದ ಟಿ.ಆರ್. ಪ್ರಕಾಶ ನಾಯಕ (ಮಾಂಟೇಸರಿ ಶಾಲೆ), ಶಿಲ್ಪ (ವಿದ್ಯಾನಿಧಿ ಶಾಲೆ, ಕುರ್ಡಿ), ಸುವರ್ಣ (ಚೌಡೇಶ್ವರಿ ಶಾಲೆ, ಮಾನ್ವಿ) ಮತ್ತು ಎಂ. ಗೀರಿಜಾ (ಜ್ಞಾನಭಾರತಿ ವಿದ್ಯಾಮಂದಿರ ಶಾಲೆ, ಪೋತ್ನಾಳ್) ಅವರನ್ನು ಸಚಿವ ಎನ್.ಎಸ್. ಬೋಸರಾಜು ಅವರು ಚಿನ್ನದ ಪದಕ ನೀಡಿ ಗೌರವಿಸಿದರು.

ತಾಲೂಕಿನ ಉತ್ತಮ ಶಿಕ್ಷಕ ಪ್ರಶಸ್ತಿ ಪಡೆದ 47 ಜನ ಶಿಕ್ಷಕರಿಗೆ ಡಾ. ರಾಜಶೇಖರ್ ಬ್ಯಾಗವಾಟ ಇವರು ತಮ್ಮ ನೆಚ್ಚಿನ ಗುರು ಹನುಮಂತಪ್ಪ ನಾಯಕ್ ಇವರ ಹೆಸರಿನಲ್ಲಿ ಸುಮಾರು 500 ರೂಪಾಯಿ ಬೆಲೆ ಬಾಳುವ ಕಿರು ಕಾಣಿಕೆಯನ್ನು 47 ಜನ ಪ್ರಶಸ್ತಿ ಪುರಸ್ಕೃತ ಶಿಕ್ಷಕರಿಗೆ ನೀಡಿದರು.ಕಾರ್ಯಕ್ರಮದಲ್ಲಿ ತಾಲೂಕಿನ ವಿವಿಧ ಖಾಸಗಿ ಶಾಲೆಗಳಲ್ಲಿ ಉತ್ತಮ ಸೇವೆ ಸಲ್ಲಿಸುತ್ತಿರುವ ಶಿಕ್ಷಕರನ್ನು ಒಕ್ಕೂಟದಿಂದ ಸನ್ಮಾನಿಸಿ ಗೌರವಿಸಲಾಯಿತು, ಶಾಸಕರ ಬಂಗರ ಪದಕ ವಿಜೇತ ಶಿಕ್ಷಕರಾದ ಟಿ.ಆರ್. ಪ್ರಕಾಶ ನಾಯಕ ಮಾಂಟೇಸರಿ ಶಾಲೆ, ವಿದ್ಯಾನಿಧಿ ಶಾಲೆ ಕುರ್ಡಿಯ ಶಿಕ್ಷಕಿ ಶಿಲ್ಪ,ಮಾನ್ವಿ ಚೌಡೇಶ್ವರಿ ಶಾಲೆಯ ಶಿಕ್ಷಕಿ ಸುವರ್ಣ, ಜ್ಞಾನಭಾರತಿ ವಿದ್ಯಾಮಂದಿರ ಪೋತ್ನಾಳ ಶಾಲೆಯ ಶಿಕ್ಷಕಿ ಎಂ.ಗೀರಿಜಾ ರವರನ್ನು ಸಚಿವ ಎನ್,ಎಸ್,ಬೋಸರಾಜು ಬಂಗಾರದ ಪದಕಗಳನ್ನು ನೀಡಿ ಸನ್ಮಾನಿಸಿ ಗೌರವಿಸಿದರು.

ಕಾರ್ಯಕ್ರಮದಲ್ಲಿ ತಹಸೀಲ್ದಾರ ಭೀಮರಾಯ ಬಿ.ರಾಮಸಮುದ್ರ, ಗ್ಯಾರಂಟಿ ಸಮಿತಿ ಅಧ್ಯಕ್ಷರಾದ ಬಿ.ಕೆ.ಅಮರೇಶಪ್ಪ, ರಾಜ ಸುಭಾಷ್ ಚಂದ್ರ ನಾಯಕ್, ನಯೋಪ್ರ ಅಧ್ಯಕ್ಷರಾದ ಅಬ್ದುಲ್ ಗಫೂರ ಸಾಬ್, ತಾಲೂಕ ಖಾಸಗಿ ಶಿಕ್ಷಣ ಸಂಸ್ಥೆಗಳ ಒಕ್ಕೂಟದ ಕಾನೂನು ಸಲಹೆಗಾರರಾದ ಶ್ರೀಮತಿ ಲಕ್ಷ್ಮಿ ದೇವಿ ನಾಯಕ್, ಅಕ್ಬರ ಪಾಷಾ, ಶರಣಯ್ಯನಾಯಕ ಗುಡದಿನ್ನಿ, ಖಾಲಿದ್ ಗುರು, ರಾಯಚೂರು ತಾಲೂಕು ಖಾಸಗಿ ಶಾಲಾ ಶಿಕ್ಷಣ ಸಂಸ್ಥೆಗಳ ಒಕ್ಕೂಟದ ಎಸ್.ಎಲ್. ಕೇಶವರೆಡ್ಡಿ, ಜೆ.ಡಿಎಸ್.ರಾಜ್ಯ ಯುವ ಘಟಕದ ಉಪಾಧ್ಯಕ್ಷರಾದ ರಾಜಾ ರಾಮಚಂದ್ರನಾಯಕ, ಶರಣಪ್ಪ ಮೇದಾ,ಹೆಚ್.ಮೌನೇಶಗೌಡ, ಸಿರವಾರ ತಾಲೂಕ ಶಿಕ್ಷಣ ಸಂಸ್ಥೆಗಳ ಒಕ್ಕೂಟದ ಅಧ್ಯಕ್ಷರಾದ ಪ್ರಕಾಶ ಪಾಟೀಲ್, ದೇವದುರ್ಗ ತಾಲೂಕ ಅಧ್ಯಕ್ಷರಾದ ಶಂಕರಲಿಂಗಯ್ಯಸ್ವಾಮಿ, ತಾಲೂಕ ಒಕ್ಕೂಟದ ಪ್ರಧಾನ ಕಾರ್ಯದರ್ಶಿ ರಾಜು ತಾಳಿಕೋಟೆ, ಕೆ.ಈ. ನರಸಿಂಹ, ನಾಗೇಶ್ವರ ರಾವ್, ಶಶಿಕಲಾ ಪಾಟೀಲ್, ಸರಿತಾ ಜೈನ್, ರಾಯಚೂರು ಗ್ರಾಮೀಣ ಖಾಸಗಿ ಶಿಕ್ಷಣ ಸಂಸ್ಥೆಗಳ ಒಕ್ಕೂಟದ ಅಧ್ಯಕ್ಷರಾದ ರವಿಕುಮಾರ ಗೋನಾಳ್,ಬಿ,ವಿ.ರೆಡ್ಡಿ, ಟಿ.ಬಸವರಾಜು ಸಿರಿವಾರ್, ಎನ್. ಉದಯಕುಮಾರ್ ಸಾಹುಕಾರ ಸಿರಿವಾರ, ಚಂದ್ರಶೇಖರ್ ಬಲ್ಲಟಗಿ, ಎಂ ಎ ಎಚ್ ಮುಕೀಮ್, ಮಾ ಫ್ರೆಂಡ್ಸ್ ತ್ರಿಮೂರ್ತಿಗಳು, ಭೀಮರಾಯ ಸೀತಿಮನಿ, ಆಲಿಮ ಖಾನ್ ಸೇರಿದಂತೆ ಇನ್ನಿತರರು ಇದ್ದರು.

### ದುಡ್ಡು ಹೊಡೆಯಲೆಂದೇ ಈ ಪ್ಲ್ಯಾನ್. ಡಿ. 4ರಂದು ಧರಣಿ

## ಆಳಂದ ಕಾಮಗಾರಿಗೆ ಚಿತ್ತಾಪೂರ ಎಇಇ ಸಹಿ : ಮಾಜಿ ಶಾಸಕ ಗುತ್ತೇದಾರ ದೂರು



**ಆಳಂದ,ನ.29–**ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ( ಕೆಕೆಆರ್‌ಡಿಬಿ) ಯೋಜನೆ ಅಡಿಯಲ್ಲಿ ಕೈಗೊಳ್ಳುತ್ತಿರುವ ಅನೇಕ ಕಾಮಗಾರಿಗಳು ಕಳಪೆ ಮಟ್ಟದಲ್ಲಿ ನಿರ್ಮಿಸಿ ಸರ್ಕಾರದ ಹಣ ಲೂಟಿ ಮಾಡುವ ಕೆಲಸ ಆಳಂದ ತಾಲೂಕಿನಲ್ಲಿ ನಡೆಯುತ್ತಿದ್ದರೂ ತಪ್ಪಿತಸ್ಥರ ವಿರುದ್ಧ ಯಾವುದೇ ಕಠಿಣ ಕ್ರಮ ಕೈಗೊಳ್ಳುತ್ತಿಲ್ಲ ಎಂದು ಮಾಜಿ ಶಾಸಕ ಸುಭಾಷ್ ಆರ್ ಗುತ್ತೇದಾರ ದೂರು ನೀಡಿದ್ದಾರೆ.

ಕಲಬುರಗಿ ಆಳಂದ ರಾಜ್ಯ ಹೆದ್ದಾರಿ ಎಸ್‌ಎಚ್ 10 ರಿಂದ ಎಲೆನಾವದಗಿ– ಕೊಡಲಹಂಗರಗಾ ಹತ್ತಿರದಿಂದ ಎಲೆನಾವದಗಿ ಗ್ರಾಮದ ರಸ್ತೆ 4.50 ಕಿ.ಮೀ ಕಾಮಗಾರಿ ಮುಗಿಯುವ ಹಂತದಲ್ಲಿ ಕಿತ್ತು ಹೋಗಿರುತ್ತದೆ. ಮೇ ತಿಂಗಳಲ್ಲಿ ಹಾಳಾಗಿ ಹೋಗಿರುತ್ತದೆ. ಮನುಷ್ಯರಿಗೆ ನಡೆದುಕೊಂಡು ಹೋಗಲು ಬರುತ್ತಿಲ್ಲ. ದ್ವಿಚಕ್ರ ವಾಹನಗಳು ತಿರುಗಾಡಲು ಬರುತ್ತಿಲ್ಲ. ಎಷ್ಟೋ ಜನರು ಬಿದ್ದು ಕೈಕಾಲು ಮುರಿದು ಕೊಂಡಿರುತ್ತಾರೆ. ಅಧಿಕಾರಿಗಳಿಗೆ ಮಳೆಗಾಲಕ್ಕಿಂತ ಮುಂಚಿತವಾಗಿಯೇ ದೂರು ನೀಡಲಾಗಿರುತ್ತದೆ. ಆದರೂ ಕೂಡ ಗುತ್ತಿಗೆದಾರರ ವಿರುದ್ಧ ಯಾವುದೇ ಕಾನೂನು ಕ್ರಮ ಕೈಗೊಂಡಿಲ್ಲ ಎಂದು ಆರೋಪಿಸಿದ್ದಾರೆ.

ಸರ್ಕಾರದ 4 ಕೋಟಿ ರೂಪಾಯಿ ಖರ್ಚಾಗಿದೆ, ನಾಲ್ಕು ತಿಂಗಳು ರಸ್ತೆ ಬಾಳಿಕೆ ಬಂದಿರುವುದಿಲ್ಲ. ಇದು ಯಾವ ವೈಜ್ಞಾನಿಕ ಪದ್ಧತಿ ಇರಬಹುದು. ಇಡೀ ರಸ್ತೆಯ ತುಂಬೆಲ್ಲ ಹುಡುಕಿದರು ಡಾಂಬರ್ ನೋಡಲು ಸಿಗುವುದಿಲ್ಲ. ಹೀಗಿರುವಾಗ ಯಾವ ಗುಣಮಟ್ಟದ ರಸ್ತೆ ನಿರ್ಮಿಸಿರಬೇಕು ಯೋಚನೆ ಮಾಡಬೇಕಾಗಿ ರುತ್ತದೆ. ಅಂದಾಜು ಪಟ್ಟಿಯಂತೆ ಕಾಮಗಾರಿ ಮಾಡಿಲ್ಲ. ಪಟ್ಟಿಯಲ್ಲಿನ ಯಾವ ನಿಯಮಗಳು ಕೂಡ ಪಾಲನೆಯಾಗಿಲ್ಲ ಸುಳ್ಳು ಲೆಕ್ಕ ತೋರಿಸಿ 4 ಕೋಟಿ. ರೂ. ಹಣ ಲೂಟಿ ಮಾಡಿರುತ್ತಾರೆ ಎಂದು ದೂರು ನೀಡಿದ್ದಾರೆ.

ಇದೇ ರೀತಿ ವಾಗ್ಧರಿ ರಿಪ್ಪನಪಲ್ಲಿ ಮುಖ್ಯ ರಸ್ತೆಯಿಂದ ಪಡಸಾವಳಿ ಗ್ರಾಮದವರೆಗಿನ ರಸ್ತೆ ಅಭಿವೃದ್ಧಿಪಡಿಸುವ ಕಾಮಗಾರಿ ರೂ. 1.00 ಕೋಟಿ( ಕೆಕೆಆರ್‌ಡಿಬಿ 2023–24ನೇ ಸಾಲಿನ) ಮಾಡಿರುತ್ತಾರೆ. ಈ ರಸ್ತೆಯೂ ಮಾಡಿದ 2 ತಿಂಗಳಲ್ಲೇ ಹಾಳಾಗಿ ಹೋಗಿರುತ್ತದೆ. ಇಲ್ಲಿಯೂ ಸರ್ಕಾರದ ಬೊಕ್ಕಸಕ್ಕೆ 1 ಕೋಟಿ ನಷ್ಟವಾಗಿರುತ್ತದೆ ಎಂದು ದೂರಿದ್ದಾರೆ.

ಆಳಂದ ತಾಲೂಕಿನ ವಾಗ್ಧರಿ– ರಿಪ್ಪನಪಲ್ಲಿ ಮುಖ್ಯರಸ್ತೆಯಿಂದ ಪಡಸಾವಳಿ ರಸ್ತೆ ಕಾಮಗಾರಿಯು ಕರ್ನಾಟಕ ಮೂಲಭೂತ ಸೌಕರ್ಯಗಳ ಅಭಿವೃದ್ಧಿ ನಿಗಮದವರಿಗೆ ವಹಿಸಿಕೊಟ್ಟಿದ್ದು, ಅದು ನಿಯಮಬಾಹಿರವಾಗಿ ಹಣ ಲೂಟಿ ಮಾಡಲೆಂದೇ ಚಿತ್ತಾಪೂರ ಉಪವಿಭಾಗದವರಿಗೆ ನೀಡಿರುತ್ತಾರೆ. ಆಳಂದ ಕಾಮಗಾರಿಯ ಬಿಲ್ಲನ್ನು ಎಇ, ಎಇಇ KRIDL ಚಿತ್ತಾಪೂರದವರು ದಾಖಲಿಸಿ ಹಣ ಲೂಟಿ ಮಾಡಿರುತ್ತಾರೆ. ಆಳಂದ ತಾಲೂಕು ಎಇಇ KRIDL SUB DIVISION AFZALPUR ವ್ಯಾಪ್ತಿಗೆ ಬರುತ್ತದೆ. ಇಷ್ಟೆಲ್ಲ ನಡೆದರೂ ಜಿಲ್ಲಾಡಳಿತ ಮೌನವಾಗಿರಲು ಕಾರಣವೇನು?. ಇದಕ್ಕೆ ಸರ್ಕಾರವೇ ಉತ್ತರಿಸಬೇಕಾಗಿದೆ ಎಂದು ಪ್ರಶ್ನಿಸಿದ್ದಾರೆ.

ಆಳಂದ ತಾಲೂಕಿನಾದ್ಯಂತ ಕೆಕೆಆರ್‌ಡಿಬಿ ಅನುದಾನದ ಅನೇಕ ಕಾಮಗಾರಿಗಳು ಕಳಪೆ ಗುಣಮಟ್ಟದಿಂದ ನಿರ್ಮಿಸಿ ಕೋಟ್ಯಾಂತರ ರೂ.ಗಳನ್ನು ಲೂಟಿ ಮಾಡುತ್ತಿರುವುದು ಸರ್ವೇಸಾಮಾನ್ಯವಾಗಿಬಿಟ್ಟಿದೆ. ಅಧಿಕಾರಿಗಳಿಗೆ ಮತ್ತು ಗುತ್ತಿಗೆದಾರರಿಗೆ ಭಯವಿಲ್ಲದಂತಾಗಿದೆ. ಭೃಷ್ಟಾಚಾರ ತಾಂಡವವಾಡುತ್ತಿದೆ. ಇದೆಲ್ಲವನ್ನು ಖಂಡಿಸಿ ಕಳಪೆ ಗುಣಮಟ್ಟದಿಂದ ನಿರ್ಮಿಸಿರುವ ಗುತ್ತಿಗೆದಾರರು ಮತ್ತು ಅದಕ್ಕೆ ಸಹಕರಿಸಿರುವ ಅಧಿಕಾರಿಗಳ ವಿರುದ್ಧ ಕಠಿಣವಾದ ಕಾನೂನು ಕ್ರಮ ಜರುಗಿಸುವಂತೆ ಒತ್ತಾಯಿಸಿ ದಿ. 4ನೇ ಡಿಸೆಂಬರ್ 2025ರಂದು ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ ಕಛೇರಿ ಎದುರುಗಡೆ ಆ ವ್ಯಾಪ್ತಿಯ ಗ್ರಾಮಸ್ಥರೊಂದಿಗೆ ಧರಣಿ ಸತ್ಯಾಗ್ರಹ ನಡೆಸಲಾಗುವುದು ಎಂದು ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

## ಎಫ್‌ಪಿಎಐನಿಂದ ಅಂತರಾಷ್ಟ್ರೀಯ ಮಹಿಳೆಯರ ಮೇಲಿನ ದೌರ್ಜನ್ಯ ನಿವಾರಣಾ ದಿನ




**ಬೀದರ,ನ.29–** ಇಲ್ಲಿನ ಫ್ಯಾಮಿಲಿ ಪ್ಲ್ಯಾನಿಂಗ್ ಅಸೋಸಿಯೇಷನ್ ಆಫ್ ಇಂಡಿಯಾ ಶಾಖೆಯಲ್ಲಿ ಅಂತರಾಷ್ಟ್ರೀಯ ಮಹಿಳೆಯರ ಮೇಲಿನ ದೌರ್ಜನ್ಯ ನಿವಾರಣಾ ದಿನ ದ ಅಂಗವಾಗಿ ನಗರದಲ್ಲಿ ವಿದ್ಯಾರ್ಥಿಗಳಿಂದ ಜಾಥಾ ಹಾಗೂ ಅರಿವು– ಮಾಹಿತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು.

ಕಾರ್ಯಕ್ರಮ ಉದ್ಘಾಟಿಸಿ,ಎಫ್ ಪಿ ಎ ಐ ಸಂಸ್ಥೆಯ ಉಪಾಧ್ಯಕ್ಷರಾದ ಡಾ. ಸವಿತಾ ಚಾಕೋತೆ ಮಾತನಾಡಿ, ಇಂದು ಜಗತ್ತಿನಲ್ಲಿ ಮಹಿಳೆಯರ ವಿರುದ್ಧ ಹಿಂಸಾಚಾರವು ವ್ಯಾಪಕವಾಗಿ, ನಿರಂತರವಾಗಿ ನಡೆಯುತ್ತಿದೆ. ಲಿಂಗ ಅಸಮಾನತೆಯನ್ನು ಹೋಗಲಾಡಿಸುವುದು ಮಹಿಳೆಯರ ಮತ್ತು ಬಾಲಕಿಯರ ಸಬಲೀಕರಣಕ್ಕೆ ಕಾನೂನುಬದ್ಧ ಚೌಕಟ್ಟುಗಳನ್ನು ಹಾಕುವುದು ಬಹಳ ಮುಖ್ಯವಾಗಿದೆ. ಮಹಿಳೆಯರು ಹಾಗೂ ಮಕ್ಕಳು ಸಾಮಾಜಿಕ ಜಾಲತಾಣಗಳಿಂದ ಆಗುವ ಮೋಸದ ಬಗ್ಗೆ ಜಾಗರೂಕರಾಗಿರಬೇಕು ಮತ್ತು ಶಿಕ್ಷಣ ಪಡೆದು ಸಬಲರಾಗಬೇಕೆಂದು ಕರೆ ನೀಡಿದರು.

ಪೊಲೀಸ್ ಇಲಾಖೆಯ ಅಕ್ಕ ಪೊಲಿಸ್ ಪಡೆಯ ಹಿರಿಯ ಅಧಿಕಾರಿ ಸಂಗೀತಾ ಅವರು ಮಹಿಳೆಯರ ವಿರುದ್ಧ ನಡೆಯುವ ಹಿಂಸೆಯನ್ನು ತೊಡೆದು ಹಾಕುವ ಸಲುವಾಗಿಯೇ ರಾಜ್ಯದಲ್ಲಿಯೇ ಪ್ರಪ್ರಥಮವಾಗಿ ಮಾದರಿಯಾಗಿ ಬೀದರನಲ್ಲಿ ಅಕ್ಕ ಪೊಲೀಸ್ ಪಡೆ ಅಸ್ತಿತ್ವಕ್ಕೆ ಬಂದಿದೆ. ಈ ದಿನ ಬೆಂಗಳೂರಿನಲ್ಲಿ ರಾಜ್ಯದ್ಯಂತ ಅಕ್ಕ ಪಡೆ ಅಸ್ತಿತ್ವಕ್ಕೆ ಬರುತ್ತಿದೆ ಎಂದು ತಿಳಿಸಿದರು.ಎಫ್ ಪಿ ಎ ಐ ಸಂಸ್ಥೆಯ ಕಾರ್ಯಕಾರಿಣಿ ಸಭೆಯ ಸದಸ್ಯ ಡಾ. ರಘು ಕೃಷ್ಣಮೂತಿ ಮಾತನಾಡಿದರು. ಸುಬ್ರಮಣ್ಯ ಪ್ರಭು ಪ್ರತಿಜ್ಞಾವಿಧಿ ಮಾಡಿಸಿದರು.ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ ಎಫ್ ಪಿ ಎ ಐ ಸಂಸ್ಥೆಯ ಕಾರ್ಯಕಾರಿಣಿ ಸಭೆಯ ಸದಸ್ಯರಾದ ಪದ್ಮಜಾ ವಿಶ್ವಕವರ್ು ಮಹಿಳೆಯರಿಗಾಗಿಯೇ ಇರುವ ಮಹಿಳಾ ಸಂರಕ್ಷಣೆ ಕಾಯಿದೆ ಹಾಗೂ ಉಚಿತ ಸೇವಾ ಕಾನೂನು ಆಯೋಗ ಕುರಿತು ಹಾಗೂ ವಿಶೇಷವಾಗಿ ಮಹಿಳೆಯರ ಮೇಲಾಗುತ್ತಿರುವ ಕೌಟುಂಬಿಕ ಹಿಂಸೆಯ ಕಾನೂನು ಕುರಿತು, ಮಹಿಳೆಯರ ಆಸ್ತಿ ಹಕ್ಕಿನ ಕುರಿತು ವಿವರವಾದ ಮಾಹಿತಿ ತಿಳಿಸಿದರು.

ಹಾಗೂ ಅಂಕಿ ಅಂಶಗಳ ಪ್ರಕಾರ ಇಂದಿಗೂ ಪ್ರತಿ 3 ಜನರಲ್ಲಿ ಒಬ್ಬ ಮಹಿಳೆ ತನ್ನ ಜೀವಿತಾವಧಿಯಲ್ಲಿ ದೌರ್ಜನ್ಯಕ್ಕೊಳಗಾಗಿರುತ್ತಾಳೆ ಎಂದು ತಿಳಿಸುತ್ತದೆ. ಆದ್ದರಿಂದ ಮಹಿಳೆಯರು ತಮ್ಮ ಮೇಲಾಗುತ್ತಿರುವ ದೌರ್ಜನ್ಯದ ಬಗ್ಗೆ ಮುಕ್ತವಾಗಿ ಮಾತನಾಡಬೇಕು ಎಂದರು. ಸಂಸ್ಥೆಯ ಶಾಖಾ ವ್ಯವಸ್ಥಾಪಕ ಶ್ರೀನಿವಾಸ ಬಿರಾದಾರ ಪ್ರಾಸ್ತಾವಿಕ ವಾಗಿ ಮಾತನಾಡಿದರು. ವಿಜಯಲಕ್ಷ್ಮಿ ಹುಡಗೆ ಕಾರ್ಯಕ್ರಮದ ನಿರೂಪಣೆ ಮಾಡಿದರು. ವಿನಾಯಕ ಕುಲಕರ್ಣಿ ವಂದನಾರ್ಪಣೆ ಮಾಡಿದರು.ವೇದಿಕೆ ಕಾರ್ಯಕ್ರಮಕ್ಕೂ ಮೊದಲು ಅಂಬೇಡ್ಕರ್ ಸರ್ಕಲ್ ಮಾರ್ಗವಾಗಿ ನಗರದಲ್ಲಿ ವಿದ್ಯಾರ್ಥಿಗಳಿಂದ ಜಾಥಾ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು

ಕಾರ್ಯಕ್ರಮದಲ್ಲಿ ಸಿದ್ದಿವಿನಾ ಯಕ ಪದವಿ ಕಾಲೇಜ್, ಸಿದ್ಧಾರ್ಥ ಪದವಿ ಹಾಗೂ ಪಿ.ಯು ಕಾಲೇಜ್, ಪನ್ನಾಲಾಲ್– ಹೀರಾಲಾಲ್ ಹಾಗೂ ಕವಿತಾ ಪ್ರೌಢಶಾಲೆಯ 300 ಕ್ಕೂ ವಿದ್ಯಾರ್ಥಿಗಳು, ಉಪನ್ಯಾಸಕರು, ಶಿಕ್ಷಕರು, ಸಂಸ್ಥೆಯ ಸಿಬ್ಬಂದಿವರ್ಗದವರು ಭಾಗವಹಿಸಿ, ಕಾರ್ಯಕ್ರಮ ಯಶಸ್ವಿಗೊಳಿಸಿದರು.

# ಟಿಶ್ಯೂ ಪೇಪರ್ ಬಳಸಬೇಕೆ? ಬೇಡವೇ?.... ಒಂದು ಲೆಕ್ಕಾಚಾರ

ಯಾವುದೇ ಸಮಾರಂಭಕ್ಕೆ ಹೋಗಲಿ ಅಲ್ಲಿ ನಾವು ಊಟದ ತಟ್ಟೆಯ ಜೊತೆಗೆ ಪಡೆಯುವ ಟಿಶ್ಯೂ ಪೇಪರನಿಂದ ತಟ್ಟೆಯನ್ನು ಒರೆಸಿ ಎಸೆದು ಮತ್ತೊಂದನ್ನು ಕೇಳಿ ಪಡೆಯುತ್ತೇವೆ. ಇನ್ನು ಹೋಟೆಲ್ಗಳಿಗೆ ಹೋದಾಗಲಂತೂ ಒಂದು ಬಳಸುವ ಕಡೆ ನಾಲ್ಕೈದು ಟಿಶ್ಯೂ ಪೇಪರ್ ಗಳನ್ನು ಬಳಸಿ ಇಡುತ್ತೇವೆ.

ಮುಖದ ಮೇಲಿನ ಎಣ್ಣೆಯ ಪಸೆಯನ್ನು ಹೋಗಲಾಡಿಸಲು, ಧೂಳಿನ ಕಣಗಳನ್ನು ಹಾಗೂ ಬೆವರನ್ನು ಒರೆಸಿಕೊಳ್ಳಲು. ಟೇಬಲ್, ಲ್ಯಾಪ್ಟಾಪ್, ಡೆಸ್ಕ ಟಾಪ್ ಮತ್ತಿತರ ಎಲೆಕ್ಟ್ರಾನಿಕ್ ವಸ್ತುಗಳ ಮೇಲ್ಮೈಗಳನ್ನು ಸ್ವಚ್ಛಗೊಳಿಸಲು, ವಾಶ್ರೂಮ್ ಗಳಲ್ಲಿ ಹೀಗೆ ಹತ್ತು ಹಲವು ಕಡೆ ನಾವು ಕೇವಲ ಒಂದು ಬಾರಿ ಬಳಸಿ ಬಿಸಾಡುವ ಟಿಶ್ಯೂ ಪೇಪರ್ ಗಳನ್ನು ಬಳಸುತ್ತೇವೆ. ಬಳಸುವುದಕ್ಕಿಂತ ಬಿಸಾಡುವುದೇ ಹೆಚ್ಚಾಗಿದೆ.

ಖರ್ಚಿನ ಬಾಬತ್ತು ಎಂದು ಇನ್ನೂ ಕೆಲ ಮನೆಗಳಲ್ಲಿ ಟಿಶ್ಯೂ ಪೇಪರ್ ದೈನಂದಿನ ಬದುಕಿನಲ್ಲಿ ಕಾಲಿಟ್ಟಿಲ್ಲ ನಿಜ ಆದರೆ ಕೆಲವರ ಮನೆಗಳಲ್ಲಿ ಈ ಟಿಶ್ಯೂ ಪೇಪರ್ಗಳನ್ನೇ ಬಹಳಷ್ಟು ಬಾರಿ ಬಳಸುತ್ತಾರೆ. ಈ ಹಿಂದೆಯೂ ನಾವು ಕಾರ್ಯಕ್ರಮಗಳಿಗೆ ಮದುವೆ ಮುಂಜಿ ಮುಂತಾದ ಸಮಾರಂಭಗಳಲ್ಲಿ ಭಾಗವಹಿಸುತ್ತಿದ್ದೆವು. ಆದರೆ ಬದಲಾದ ಕಾಲಘಟ್ಟದಲ್ಲಿ ಅತಿಯಾದ ಸ್ವಚ್ಛತೆಯ ಪರಿಕಲ್ಪನೆ ತೊಳೆದಿದ್ದೆಲ್ಲವೂ ಸ್ವಚ್ಛವಾಗಿಲ್ಲ ಎಣ್ಣೆಯ ಜಿಡ್ಡಿನಿಂದ ಕೂಡಿದೆ ಎಂಬ ಭಾವ ( ಅದು ಸ್ವಲ್ಪಮಟ್ಟಿಗೆ ನಿಜವು ಕೂಡ!) ಟಿಶ್ಯೂ ಪೇಪರ್ ಬಳಸಿ ತಟ್ಟೆಯನ್ನು ಒರೆಸಲು ಕಾರಣವಾಗುತ್ತದೆ.

ಹಾಗಾದರೆ ಈ ಟಿಶ್ಯೂ ಪೇಪರ್ ಗಳನ್ನು ಬಳಸಬಾರದೇ ಎಂದು ಆಶ್ಚರ್ಯಸೂಚಕ ಧ್ವನಿಯಲ್ಲಿ ನಿಮ್ಮ ಪ್ರಶ್ನೆ ಬಂದರೆ ಪರಿಸರ ಪ್ರೇಮಿಗಳ ಉತ್ತರ ಹೀಗಿರುತ್ತದೆ.... ತೀರ ಅವಶ್ಯಕತೆ ಇದ್ದರೆ ಮಾತ್ರ ಬಳಸಿ ಎಂದು. ಅನವಶ್ಯಕವಾಗಿ ಟಿಶ್ಯೂ ಪೇಪರ್ ಗಳನ್ನು ಬಳಸುವ ಮೂಲಕ ಪರಿಸರವನ್ನು ಹಾನಿಗೊಳಿಸದಿರಿ ಎಂಬುದು ಅವರ ಕಳಕಳಿಯ ಮನವಿಯಾಗಿರುತ್ತದೆ.

ಟಿಶ್ಯೂ ಪೇಪರ್ ಬಳಕೆಗೂ ಪರಿಸರದ ಹಾನಿಗೂ ಏನು ಸಂಬಂಧ ಎಂಬ ಪ್ರಶ್ನೆಗೆ ಉತ್ತರ ಹುಡುಕುತ್ತಾ ಹೊರಟರೆ ಭಯಾನಕ



ಸತ್ಯ ಕಣ್ಣಿಗೆ ಬೀಳುತ್ತದೆ. ನಮ್ಮ ದೇಶದಲ್ಲಿ ಈ ಹಿಂದೆ ಮರದಿಂದ ಬೇರೆಯಾಗಿ ಬಿದ್ದ ಕಟ್ಟಿಗೆಯ ತುಂಡುಗಳನ್ನು ಉರುವಲು ಮತ್ತಿತರ ಕೆಲಸ ಕಾರ್ಯಗಳಿಗೆ ಬಳಸುತ್ತಿದ್ದರು. ಬದಲಾದ ಕಾಲಘಟ್ಟದಲ್ಲಿ ಕಾಗದ ತಯಾರಿಕೆಗೆ ಶೇಕಡ 35ರಷ್ಟು ಕಟ್ಟಿಗೆಯನ್ನು ಬಳಸಲಾಗುತ್ತಿದೆ. ಅದರಲ್ಲೂ ಕಾಗದಕ್ಕಿಂತ ಹೆಚ್ಚಾಗಿ ಟಿಶ್ಯೂ ಪೇಪರ್ ಗಳ ತಯಾರಿಕೆಗೆ ಹೆಚ್ಚು ಬಳಸಲಾಗುತ್ತಿದೆ.

ಪ್ರಾರಂಭದಲ್ಲಿ ಅಷ್ಟೇನೂ ಉತ್ತಮ ಗುಣಮಟ್ಟದ ಟಿಶ್ಯೂ ಪೇಪರ್ ಗಳು ಬರುತ್ತಿರಲಿಲ್ಲ. ಜನರ ಆಧ್ಯತೆ ಬದಲಾಗುತ್ತಾ ಹೋದಂತೆ ಅತ್ಯುತ್ತಮ ಗುಣಮಟ್ಟದ ಟಿಶ್ಯೂ ಪೇಪರ್ ಗಳು ಬೇಕು ಎಂಬ ಕಾರಣವನ್ನು ಒಡ್ಡಿ

ಕಾಗದದ ಮರುಬಳಕೆಯನ್ನು ತಡೆಹಿಡಿದರು. ಅತ್ಯಂತ ನಯವಾದ ಮೇಲ್ಮೈಯುಳ್ಳ ಟಿಶ್ಯೂ ಪೇಪರ್ ಗಳು ತಯಾರಾಗತೊಡಗಿದವು. ಹೀಗೆ ತಯಾರಾಗುತ್ತಿರುವ ಟಿಶ್ಯೂ ಪೇಪರ್ ಗಳ ತಯಾರಿಕೆಗೆ ಅತ್ಯವಶ್ಯಕ ಮೂಲ ವಸ್ತುವಾಗಿ ಒಣಗಿದ ಮರದ ತುಂಡಿನ ಬದಲಾಗಿ ಹಸಿ ಮರವನ್ನು ಕಡಿದು ಬಳಸಲಾಗುತ್ತಿದೆ. ಒಂದು ಅಂದಾಜಿನ ಪ್ರಕಾರ ಪ್ರತಿದಿನ ಸುಮಾರು 27 ಸಾವಿರಕ್ಕೂ ಹೆಚ್ಚು ಮರಗಳನ್ನು ಕೇವಲ ಟಿಶ್ಯೂ ಪೇಪರ್ ತಯಾರಿಸಲು ಕಡಿಯಲಾಗುತ್ತಿದೆ. ಹೀಗೆ ಕಡಿಯುವ ಒಟ್ಟು ಮರಗಳ ಸಂಖ್ಯೆ ವರ್ಷಕ್ಕೆ ಸುಮಾರು ಒಂದು ಕೋಟಿಯಷ್ಟು. ಕೇವಲ ಟಿಶ್ಯೂ ಪೇಪರ್ ಗಳನ್ನು ತಯಾರಿಸಲು ಕೋಟಿ ಸಂಖ್ಯೆಯಲ್ಲಿ ಮರಗಳನ್ನು ಬಳಸಲಾಗುತ್ತಿದೆ ಎಂದರೆ ನಾವು ಅವುಗಳ ಮೇಲೆ ಅದೆಷ್ಟು ಅವಲಂಬಿತರಾಗಿದ್ದೇವೆ ಎಂಬುದನ್ನು ಯೋಚಿಸಿ.

ಪರಿಸ್ಥಿತಿ ಇದೇ ರೀತಿ ಮುಂದುವರೆದರೆ ಮುಂದಿನ ನೂರು ವರ್ಷಗಳಲ್ಲಿ ನಾವು ಈ ಭೂಮಿಯ ಮೇಲೆ ಬದುಕಲು ಸಾಧ್ಯವೇ ಇಲ್ಲ ಎಂಬಷ್ಟು ಭೀಕರ ಪರಿಸ್ಥಿತಿಯನ್ನು ಎದುರಿಸಬೇಕಾಗುತ್ತದೆ. ಹಸಿರಿಲ್ಲದೆ ನಮಗೆ ಉಸಿರು ದೊರೆಯುವುದಾದರೂ ಹೇಗೆ?

ಮರಗಳನ್ನು ಕಡಿಯುತ್ತಾ ಹೋದರೆ ಅದೇ ಪ್ರಮಾಣದಲ್ಲಿ ಬೆಳೆಸಲು ಸಾಧ್ಯವೇ?

ಕ್ಷಣಮಾತ್ರದಲ್ಲಿ ಕೊಡಲಿಯ ಏಟಿನಿಂದ ನಾವು ಮರವೊಂದನ್ನು ಉರುಳಿಸಬಹುದು, ಆದರೆ ಅದೇ ಮರ ಬೆಳೆಯಲು ವರ್ಷಗಳೇ ಬೇಕು. ಇಡೀ ಭಾರತ ದೇಶದ ಪ್ರಜೆಗಳು ಮೊಣಕಾಲೂರಿ ಪ್ರಾರ್ಥಿಸಿದರೂ, ಅತ್ತು ಗೋಗರೆದರೂ ಕೂಡ ಒಂದೇ ಒಂದು ಗಿಡ ಒಂದಡಿಯಷ್ಟು ಕೂಡ ಬೆಳೆಸಲು ಒಂದು ದಿನಕ್ಕೆ ಸಾಧ್ಯವಾಗುವುದಿಲ್ಲ..... ಜೀವದಾಯಿನಿಯಾಗಿರುವ ಹಸಿರು ಮರಗಳನ್ನು ಬೆಳೆಸಿದ ನಾವು ಅವುಗಳನ್ನು ಕಡಿಯಲು ಯಾವ ಹಕ್ಕನ್ನು ಹೊಂದಿದ್ದೇವೆ ನೀವೇ ಹೇಳಿ?

ಹಾಗಾದರೆ ನಾವು ಟಿಶ್ಯೂ ಪೇಪರ್ ಗಳ ಬಳಕೆಯನ್ನು ಹೇಗೆ ತಡೆ ಹಿಡಿಯಬಹುದು?

ಮೊದಲನೆಯದಾಗಿ ಸದಾ ನಮ್ಮ ಜೊತೆ ಒಂದು ಕರ ವಸ್ತ್ರ, ನಮ್ಮ ಪ್ಯಾಂಟುಗಳ ಜೇಬುಗಳಲ್ಲಿ, ಹ್ಯಾಂಡ್ ಬ್ಯಾಗುಗಳಲ್ಲಿ ಇರಲೇಬೇಕು.

ಇನ್ನು ನಾವು ಟಿಶ್ಯೂ ಪೇಪರ್ಗಳನ್ನು ಬಳಸುವ ಸ್ಥಳಗಳಲ್ಲಿ ಕಡ್ಡಾಯವಾಗಿ ಒಂದೊಂದು ಬಟ್ಟೆಯ ನ್ಯಾಪ್ಕಿನಗಳನ್ನು ಇಡಬೇಕು. ಅಡುಗೆ ಮನೆಯಲ್ಲಿ ಬಚ್ಚಲುಮನೆ, ವಾಶ್ ಬೇಸಿನ್ಗಳ ಬಳಿ, ಊಟದ ಮೇಜಿನ ಬಳಿ, ಕಾರುಗಳಲ್ಲಿ ಸಾಧ್ಯವಾದಷ್ಟು ಬಟ್ಟೆಯ ನ್ಯಾಪ್ಕಿನ್ಗಳನ್ನು ಬಳಕೆ ಮಾಡಬೇಕು.

ಕಾಗದದ ಹಾಳೆಯಿಂದ ತಯಾರಿಸಲಾಗುವ ಟಿಶ್ಯೂ ಪೇಪರಗಳ ಬಳಕೆಯನ್ನು ತೀರಾ ಅನಿವಾರ್ಯವಲ್ಲದ ಹೊರತು ಮಾಡಲೇಬಾರದು. ನಮ್ಮ ಬಳಿ ಬಟ್ಟೆ ಇಲ್ಲವೇ ಇಲ್ಲ, ಕೈ ತೊಳೆಯಲು ನೀರು ಕೂಡ ದೊರೆಯುತ್ತಿಲ್ಲ ಎಂಬ ಸಮಯದಲ್ಲಿ ಮಾತ್ರ ಟಿಶ್ಯೂ ಪೇಪರನ್ನು ಬಳಸಿ.

ಕಳೆದ ಕೆಲವೇ ವರ್ಷಗಳಿಂದ ತುಸು ಹೆಚ್ಚೇ ಚಾಲ್ತಿಯಲ್ಲಿರುವ ಟಿಶ್ಯೂ ಪೇಪರ್ ಗಳನ್ನು ಬಳಸುತ್ತಿರುವ ನಾವು ಊಟದ ಮೊದಲು ಹಾಗೂ ಊಟದ ನಂತರ ಕೈ ತೊಳೆಯುವುದನ್ನು ರೂಢಿಸಿಕೊಳ್ಳೋಣ.

ನೀರು ಎಷ್ಟೊಂದು ಬಳಕೆಯಾಗುತ್ತದಲ್ಲವೇ ಅಂತ ನೀವು ಕೇಳಬಹುದು, ಆದರೆ ಸಂಶೋಧನೆಗಳ ಪ್ರಕಾರ ಒಂದು ಟಾಯ್ಲೆಟ್ ಪೇಪರ್ ನ ಸುರುಳಿಯನ್ನು ತಯಾರಿಸಲು ಸುಮಾರು 37 ಗ್ಯಾಲನ್ ನಷ್ಟು ನೀರನ್ನು ಬಳಸಲಾಗುತ್ತದೆ ಮತ್ತು ಇದರ ಜೊತೆಗೆ ಸಾಕಷ್ಟು ಪ್ರಮಾಣದ ಮರಗಳನ್ನು ಕಡಿಯುವುದು ಕೂಡ ಸೇರಿದೆ. ಈಗ ಹೇಳಿ... ಕೈ ತೊಳೆಯುವುದು ಒಳ್ಳೆಯದೋ ಟಿಶ್ಯೂ ಪೇಪರ್ ಬಳಕೆಯೋ ಎಂದು.

ನಮ್ಮ ನಾಡಿನ ಭವ್ಯ ಭವಿಷ್ಯಕ್ಕೆ ಒಳ್ಳೆಯ ಪರಿಸರವನ್ನು ಹೊಂದಲು ತೀರ ಅನಿವಾರ್ಯವಲ್ಲದ ಹೊರತು ನಾವು ಸಾಧ್ಯವಾದಷ್ಟು ಟಿಶ್ಯೂ ಪೇಪರ್ ಗಳ ಬಳಕೆಯನ್ನು ನಿಲ್ಲಿಸೋಣ.

ಏನಂತೀರಾ ಸ್ನೇಹಿತರೆ?

**–ವೀಣಾ ಹೇಮಂತಗೌಡ ಪಾಟೀಲ್,**
**ಮುಂಡರಗಿ, ಗದಗ್**

# ಕದನ ವಿರಾಮದ ಸಭೆ:ಅಶೋಕ್ ವ್ಯಂಗ್ಯ



**ಬೆಂಗಳೂರು, ನ. 29–** ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ರವರ ಉಪಹಾರ ಸಭೆ ಕದನ ವಿರಾಮದ ಸಭೆ ಎಂದು ಪ್ರತಿಪಕ್ಷ ನಾಯಕ ಆರ್. ಅಶೋಕ್ ವ್ಯಂಗ್ಯವಾಡಿದ್ದಾರೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಬಣಗಳ ನಡುವೆ ಕದನ ವಿರಾಮಕ್ಕೆ ಎರಡು ಬಣಗಳ ಕಮಾಂಡರ್‌ಗಳ ನಡುವಿನ ಸಭೆಯಂತೆ ನಮಗೆ ಕಾಣಿಸುತ್ತಿದೆ ಎಂದು ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಲೇವಡಿ ಮಾಡಿದ್ದಾರೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ನಡುವಿನ ಬಹು ನಿರೀಕ್ಷಿತ ಉಪಹಾರ ಶೃಂಗಸಭೆ ಅಂತೂ ಇಂತೂ ಜರುಗಿದೆ. ಆದರೆ ಕಾಂಗ್ರೆಸ್‌ನಲ್ಲಿ ಹಲವು ದಿನಗಳಿಂದ ನಡೆಯುತ್ತಿರುವ ವಿದ್ಯಮಾನ, ಗೊಂದಲಗಳಿಗೆ ಮಾಧ್ಯಮವನ್ನು ದೂಷಿಸಿರುವುದು ಹಾಸ್ಯಾಸ್ಪದವಾಗಿದೆ ಎಂದಿದ್ದಾರೆ.

ಇಷ್ಟಕ್ಕೂ ಈ ಗೊಂದಲ ಸೃಷ್ಟಿಸಿದ್ದು ಯಾರು, ನವೆಂಬರ್‌ನಲ್ಲಿ ಕ್ರಾಂತಿ ಎಂದು ಕರೆ ನೀಡಿ ಪಕ್ಷದಲ್ಲಿ ಗೊಂದಲದ ವಾತಾವರಣ ಸೃಷ್ಟಿಸಿದ್ದು ಪತ್ರಕರ್ತರಾ, ಕೊಟ್ಟ ಮಾತು ಉಳಿಸಿಕೊಳ್ಳುವವನು ನಿಜವಾದ ನಾಯಕ, ಐದಾರು ಜನರ ಮಧ್ಯೆ ನಡುವೆ ನಡೆದಿರುವ ವ್ಯಾಪಾರ, 5 ವರ್ಷ ನಾನೇ ಸಿಎಂ ಎಂದೆಲ್ಲಾ ಬಹಿರಂಗ ಹೇಳಿಕೆಗಳ ಮೂಲಕ ಬಿಕ್ಕಟ್ಟು ಸೃಷ್ಟಿಸಿದ್ದು ಪತ್ರಕರ್ತರಾ, ಶಕ್ತಿ ಪ್ರದರ್ಶನಕ್ಕೆಂದು ಶಾಸಕರ ಗುಂಪುಗಳನ್ನು ಕಟ್ಟಿಕೊಂಡು ತಂಡ ತಂಡವಾಗಿ ದೆಹಲಿಗೆ ಹೋಗಿದ್ದು, ಗುಪ್ತ ಸಭೆಗಳನ್ನು ನಡೆಸಿದ್ದು ಪತ್ರಕರ್ತರಾ ಎಂದು ಅವರು ಪ್ರಶ್ನಿಸಿದ್ದಾರೆ.

ಇವತ್ತು ರಾಜ್ಯದಲ್ಲಿ ಸೃಷ್ಟಿಯಾಗಿರುವ ಈ ಎಲ್ಲಾ ಗೊಂದಲಗಳಿಗೆ ನಿಮ್ಮಿಬ್ಬರ ಒಣ ಪ್ರತಿಷ್ಠೆ, ಅಧಿಕಾರದ ಲಾಲಸೆ ಮತ್ತು ಗುಂಪುಗಾರಿಕೆಯೇ ಹೊರತು ಎಂದು ಸಿದ್ದರಾಮಯ್ಯ ಮತ್ತು ಡಿಕೆಶಿ ವಿರುದ್ಧ ವಾಗ್ದಾಳಿ ನಡೆಸಿರುವ ಆರ್. ಅಶೋಕ್, ಈ ಗೊಂದಲಗಳಿಗೆ ನಿಮ್ಮ ನಾಟಕಗಳನ್ನು ವರದಿ ಮಾಡಿ ಸತ್ಯವನ್ನು ಬಿತ್ತರಿಸಿದ ಮಾಧ್ಯಮಗಳು ಗೊಂದಲಗಳಿಗೆ ಕಾರಣವಲ್ಲ ಎಂದು ಹೇಳಿದ್ದಾರೆ.

ಈ ತೋರಿಕೆಯ ಏಕತೆಯ ಪ್ರದರ್ಶನದ ಹಿಂದೆ ಎಲ್ಲರಿಗೂ ಸ್ಪಷ್ಟವಾಗಿ ಕಾಣುತ್ತಿರುವುದು ಬಿಡಿಸಲಾಗದ ಕಗ್ಗಂಟು ಮತ್ತು ಸಂಪೂರ್ಣವಾಗಿ ಒಡೆದ ಕನ್ನಡಿಯ ಚೂರುಗಳೇ ಹೊರತು ಯಾವುದೇ ಪ್ರಾಮಾಣಿಕ ಮೈತ್ರಿಯಲ್ಲ ಎಂದಿದ್ದಾರೆ.

# ಚಂದ್ರಹಾಸ, ದೇವರಾಜಗೆ ದೃಶ್ಯಭೂಷಣ ಪ್ರಶಸ್ತಿ ಪ್ರದಾನ



**ಕಲಬುರಗಿ,ನ.29–**ದಿ ಐಡಿಯಲ್ ಫೈನ್ ಆರ್ಟ್ ಸಂಸ್ಥೆ ಮಾತೋಶ್ರೀ ನೀಲಗಂಗಮ್ಮ ಜಿ.ಅಂದಾನಿ ಆರ್ಟ್‌ಗ್ಯಾಲರಿಯಲ್ಲಿಖ್ಯಾತ ಕಲಾವಿದ ಡಾ.ಅಂದಾನಿ ವಿ.ಜಿ. ಯವರ ಜನ್ಮದಿನೋತ್ಸವ ಹಾಗೂ ದಿ.ಎಂ.ಬಿ. ಪಾಟೀಲ ಸ್ಮರಣಾರ್ಥ 2025ನೇ ಸಾಲಿನ ದೃಶ್ಯಭೂಷಣ ಪ್ರಶಸ್ತಿ ಪ್ರದಾನ ಸಮಾರಂಭ ಶುಕ್ರವಾರ ಜರುಗಿತು.

ಕರ್ನಾಟಕ ಜಾನಪದ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಡಾ.ಡಿ.ಬಿ.ನಾಯಕ ಅವರು ಕಾರ್ಯಕ್ರಮ ಉದ್ಘಾಟಿಸಿ ಮಾತನಾಡುತ್ತ, ಸಮಾಜದಲ್ಲಿ ಬೇರೆಯವರ ಶ್ರೇಯಸ್ಸಿಗೆ ಶ್ರಮಿಸಿದವರಿಗೆ ಜನ ಯಾವತ್ತು

ತಮ್ಮ ಮನಸ್ಸಿನಲ್ಲಿ ಇಟ್ಟುಕೊಂಡು ಅವರ ಹೆಸರನ್ನು ಅಜರಾಮರನ್ನಾಗಿ ಮಾಡುತ್ತಾರೆ ಎಂದು ಹೇಳಿದರು.

ಇತಿಹಾಸದಲ್ಲಿ ಎಷ್ಟೋ ರಾಜ ಮಹಾರಾಜ ಅಳಿದು ಹೋಗಿದ್ದಾರೆ. ಗಾಂಧಿಯಂಥವರು ಸಂತರು ಕೇವಲ ಇತರಗೋಸ್ಕರ ತಮ್ಮ ಜೀವನವನ್ನು ಮುಡುಪಾಗಿಟ್ಟಿದ್ದಾರೆ. ಅತಂಹ ವ್ಯಕ್ತಿತ್ವವುಳ್ಳವರು ಮಾತ್ರ ಇತಿಹಾಸ ಸೃಷ್ಟಿಸಲು ಸಾಧ್ಯ ಎಂದು ಹೇಳಿದರು.

ಕಲೆ ಎನ್ನವುದು ತುಂಬಾ ಶ್ರೇಷ್ಠವಾದದ್ದು, ಕಲೆ ಒಬ್ಬರಿಗೆ ಒಲಿಯ ಬೇಕಾದರೆ ದೈವ ಶಕ್ತಿಯ ಪ್ರೇರಣೆ ಇದ್ದಾಗ ಮಾತ್ರ ಆ ಕಾರ್ಯ ನೆರವೇರಿಸಲು ಸಾಧ್ಯ ಎಂದು ಹೇಳಿದರು.

ಇದರಲ್ಲಿದೆ ದೇಶದಲ್ಲಿ ಆರ್ಥಿಕ ಸದೃಢತೆ ಎಷ್ಟು ಮುಖ್ಯವೋ ಅಷ್ಟೇ ಸಾಂಸ್ಕೃತಿಕ ಬೆಳವಣಿಗೆಯೂ ಅಷ್ಟೇ ಮುಖ್ಯವಾಗಿದೆ ಅಲ್ಲದೆ ಕಲೆ ಸಾಂಸ್ಕೃತಿಕ ಸಂಪತ್ತು ಬೆಳೆದಂತೆಲ್ಲಾ ಸಾಮಾಜಿಕ ಪರಿವರ್ತನೆಗೆ ಕಾರಣವಾಗುತ್ತದೆ ಎಂದು ಹೇಳಿದರು.

ಮನುಷ್ಯನಿಗೆ ನೀರು ಆಹಾರದಷ್ಟೆ, ಕಲೆ ಮುಖ್ಯವಾಗಿದೆ. ಹಾಗಾಗಿ ಇವತ್ತು ಪ್ರಪಂಚದಲ್ಲಿ ಆದಿ ಸಂಸ್ಕೃತಿ, ಗುಹಾಲಯ ಚಿತ್ರಗಳು ಪ್ರಾಚೀನ ಪರಂಪರೆಗೆ ಸಾಕ್ಷಿಯಾಗಿ ನಿಂತಿವೆ ಎಂದು ಹೇಳಿದರು. ಅದೇ ರೀತಿ ಕಲಬುರಗಿ ಕಲಾವಲಯದಲ್ಲಿ ಸಾಂಸ್ಕೃತಿಕ ವಲಯ ಇಂದು ಬೆಳೆಯಲು ಡಾ.ಅಂದಾನಿಯವರ ಶ್ರಮ ಅಪಾರವಾಗಿದೆ ಅವರ ಅನೇಕ ಕಲಾವಿದರನ್ನು ಈ ಭಾಗದಲ್ಲಿ ಗುರುತಿಸಿ ಪ್ರೋತ್ಸಾಹಿಸುವ ಕಾರ್ಯದಲ್ಲಿ ಸಫಲರಾಗಿದ್ದಾರೆ ಎಂದು ನುಡಿದರು.

2025 ದೃಶ್ಯ ಭೂಷಣ ಪ್ರಶಸ್ತಿಗೆ ಪ್ರಾಧ್ಯಾಪಕ ಹಾಗೂ ಕಲಾವಿದ ಚಂದ್ರಹಾಸ್ ಜಾಲಿಹಾಳ, ಬೆಂಗಳೂರಿನ ದೇವರಾಜ. ಬಿ.ಅವರು ಭಾಜನರಾಗಿದ್ದಾರೆ. ಮುಖ್ಯ ಅತಿಥಿಯಾಗಿ ಕನ್ನಡ ನಾಡು ಲೇಖಕರ ಸಹಕಾರ ಸಂಘ ಅಧ್ಯಕ್ಷ ಅಪ್ಪಾರಾವ ಅಕ್ಕೋಣಿ ಅವರು ಭಾಗವಹಿಸಿದ್ದರು. ಹಿರಿಯ ಕಲಾವಿದ ಡಾ ವಿ. ಜಿ ಅಂದಾನಿ ಅಧ್ಯಕ್ಷತೆವಹಿಸಿದ್ದರು. ವೇದಿಕೆ ಮೇಲೆ ದಿ ಐಡಿಯಲ್ ಫೈನ್‌ಆರ್ಟ ಸಂಸ್ಥೆ, ಅಧ್ಯಕ್ಷೆ ಕಲಾವತಿ, ಗೌತಮ ಅಂದಾನಿ ಉಪಸ್ಥಿತರಿದ್ದರು. ಪ್ರಿಯಾ ರವೀಂದ್ರ ಪ್ರಾರ್ಥನಾಗೀತೆ ಹಾಡಿದರು. ಡಾ. ಆಕಾಶ ಸ್ವಾಗತಿಸಿದರು. ಡಾ. ಎಚ್.ವಿ. ಮಂತಟ್ಟಿ ನಿರೂಪಿಸಿ ವಂದಿಸಿದರು. ಶಿಬಿರದ ಕಲಾವಿದರಿಗೆ ನೆನಪಿನ ಕಾಣಿಕೆ ನೀಡಿಗೌರವಿಸಿದರು. ನಗರದ ಹಿರಯ ಕಲಾವಿದರು, ಕಲಾ ಪ್ರೇಮಿಗಳು ಹಾಗೂ ಕಲಾ ವಿದ್ಯಾರ್ಥಿಗಳು ,ಸಿಬ್ಬಂದಿವರ್ಗದವರು ಮುಂತಾದವರು ಉಪಸ್ಥಿತರಿದ್ದರು.

# ಶಿಕ್ಷಣ ಕ್ರಾಂತಿಯ ಹರಿಕಾರ ಮಹಾತ್ಮ ಜ್ಯೋತಿಬಾ ಫುಲೆ ಸಂದೇಶ ಎಲ್ಲೆಲ್ಲೂ ಹರಡಲಿ

**ಕಲಬುರಗಿ,ನ.29–**ಮಹಾತ್ಮ ಜ್ಯೋತಿರಾವ್ ಫುಲೆ ಅವರ 135ನೇ ಸ್ಮರಣ ದಿನ ಕಾರ್ಯಕ್ರಮವನ್ನು ಇಂದು ಎಐಡಿಎಸ್‌ಒ ಜಿಲ್ಲಾ ಕಛೇರಿಯಲ್ಲಿ ಹಮ್ಮಿಕೊಳ್ಳಲಾಗಿತ್ತು.

ಈ ಸಂದರ್ಭದಲ್ಲಿ ಎಐಡಿಎಸ್‌ಒ ರಾಜ್ಯ ಅಧ್ಯಕ್ಷರಾದ ಕೆ.ಎಸ್ ಅಶ್ವಿನಿ ಮಾತನಾಡುತ್ತ, ಶಿಕ್ಷಣವು ಸಾರ್ವತ್ರಿಕವಾಗಿರಬೇಕು ಮತ್ತು ಎಷ್ಟೇ ಸಂಖ್ಯೆಯಿದ್ದರೂ, ಅದು ಎಲ್ಲರನ್ನೂ ತಲುಪುವಂತೆ ಇರಬೇಕು ಎಂದು ಬಲವಾಗಿ ಪ್ರತಿಪಾದಿಸಿದ ಮಹಾತ್ಮ ಜ್ಯೋತಿಬಾ ಫುಲೆ ಅವರು ಈ ದೇಶದ ಬಡವರಿಂದ ಸುಂಕ ವಸೂಲಿ ಮಾಡುತ್ತಿದ್ದ ಪರಕೀಯ ಬ್ರಿಟಿಷ್ ಸರ್ಕಾರವು ಶಿಕ್ಷಣಕ್ಕೆ ಒತ್ತು ನೀಡುವಂತೆ ಧ್ವನಿ ಎತ್ತಿದರು. ಅಜ್ಞಾನದ ಅಂಧಕಾರವನ್ನು

ಹೊಡೆದೋಡಿಸಲು ಮಹಿಳೆ ಮತ್ತು ದಲಿತರಿಗೆ ಜ್ಞಾನದ ಬೆಳಕನ್ನು ನೀಡಲು ಅವರು ಶಾಲೆಗಳನ್ನು ಆರಂಭಿಸಿದರು. ಕೇವಲ ಶಿಕ್ಷಣದಿಂದ ಮಾತ್ರವೇ ಮನುಷ್ಯರು ವಿಮರ್ಶಾತ್ಮಕ ಧೋರಣೆ ಮತ್ತು ಆತ್ಮ ಸಮ್ಮಾನವನ್ನು ಹೊಂದಲು ಸಾಧ್ಯ ಎಂಬುದನ್ನು



ಜ್ಯೋತಿಬಾ ಬಲವಾಗಿ ಪ್ರತಿಪಾದಿಸಿದರು. ಅವರು ಹುಟ್ಟಿ 2 ಶತಮಾನಗಳ ನಂತರವೂ ಸರ್ಕಾರಗಳ ಧೋರಣೆ ಹೇಗಿದೆ ? ಕಷ್ಟಗಳಿಗೆ ತಲೆಬಾಗದ ಜ್ಯೋತಿಬಾ, ತಮ್ಮ ಜೀವನದ ಸಂಕಷ್ಟವನ್ನು ಲೆಕ್ಕಿಸದೆ, ಈ ನೆಲದಲ್ಲಿ ಮೊಟ್ಟಮೊದಲ ಬಾರಿಗೆ ಶೋಷಿತರಲ್ಲೇ ಶೋಷಿತರಾದ ಅಸ್ಪೃಶ್ಯರಿಗೆ ಶಿಕ್ಷಣದ ಬಾಗಿಲನ್ನು ತೆರೆದಿದ್ದರು. ಮಿಲಿಯಾಂತರ ಜನರಿಗೆ ಉನ್ನತ ನೈತಿಕ ಮಟ್ಟ ಮತ್ತು ಸಾಮಾಜಿಕ ಜವಾಬ್ದಾರಿಯನ್ನು ಒದಗಿಸದೆ ದೇಶದ ಏಳಿಗೆಯು ಸಾಧ್ಯವಿಲ್ಲ ಎಂದು ಅವರು ಪ್ರತಿಪಾದಿಸಿದರು. ರೈತರಿಂದ ತೆರಿಗೆ ಮತ್ತು ಸುಂಕವನ್ನು ವಸೂಲಿ ಮಾಡುವ ಸರ್ಕಾರವು ಬಡವರ ಮಕ್ಕಳಿಗೆ ಶಿಕ್ಷಣವನ್ನು ನೀಡುತ್ತಿಲ್ಲ. ಕೇವಲ ಕೆಲವು ಪ್ರತಿಷ್ಠಿತರ ಮಕ್ಕಳಿಗೆ ವಿಶ್ವವಿದ್ಯಾಲಯಗಳಲ್ಲಿ ಶಿಕ್ಷಣ ನೀಡಲಾಗುತ್ತಿದೆ. ಇದರ ಬದಲಿಗೆ ಸಮೂಹ ಶಿಕ್ಷಣಕ್ಕೆ ಒತ್ತು ನೀಡಬೇಕು ಎಂದು ಅವರು ಆಗ್ರಹಿಸಿದರು.

ಇಂದು ಕರ್ನಾಟಕ ರಾಜ್ಯ ಸರ್ಕಾರವು ಕೆಪಿಎಸ್ ಮ್ಯಾಗ್ನೆಟ್ ಶಾಲೆ ಯೋಜನೆಯಡಿ 40,000ಕ್ಕೂ ಅಧಿಕ ಶಾಲೆಗಳನ್ನು ಮುಚ್ಚಲು ಹೊರಟಿದೆ. ಸಮೂಹ ಶಿಕ್ಷಣಕ್ಕಾಗಿ ತೆರೆದ ಹಳ್ಳಿಯ ಶಾಲೆಗಳನ್ನು ಮುಚ್ಚಿ, ಕೇವಲ ಗ್ರಾಮ ಪಂಚಾಯಿತಿಗೆ ಒಂದರಂತೆ ಆರಂಭವಾಗಲಿರುವ ಈ ಮ್ಯಾಗ್ನೆಟ್ ಶಾಲೆಗಳಡಿ ವಿಲೀನಗೊಳಿಸಲಾಗುತ್ತದೆ. ವಿದೇಶಿ ಬ್ಯಾಂಕಿನಿಂದ ಸಾಲ ಪಡೆದು ಮೊದಲ ಹಂತ`ದಲ್ಲಿ, 800 ಶಾಲೆಗಳನ್ನು ಮ್ಯಾಗ್ನೆಟ್ ಶಾಲೆಗಳು ಎಂದು ಗುರುತಿಸಲಾಗಿದೆ. ಅಂದರೆ ಕರ್ನಾಟಕ ಪಬ್ಲಿಕ್ ಶಾಲೆಯ ಸುತ್ತಮುತ್ತಲಿನ 6ರಿಂದ 7ಕಿ.ಮೀ ವ್ಯಾಪ್ತಿಯ ಶಾಲೆಗಳನ್ನು ತನ್ನಲ್ಲಿ ವಿಲೀನಗೊಳಿಸಿಕೊಳ್ಳಲಿದೆ. ಬಡ ವಿದ್ಯಾರ್ಥಿಗಳಿಂದ ಶಿಕ್ಷಣ ದೂರ ಮಾಡುವ ನೀತಿ ವಿರುದ್ಧ ಹೋರಾಟಕ್ಕೆ ಕರೆ ನೀಡಿದರು.

ಈ ಸಂದರ್ಭದಲ್ಲಿ ಎಐಡಿಎಸ್‌ಓ ರಾಜ್ಯ ಕಾರ್ಯದರ್ಶಿ ಅಜಯ ಕಾಮತ್, ಜಿಲ್ಲಾ ಕಾರ್ಯದರ್ಶಿ ತುಳಜರಾಮ ಎನ್ ಕೆ, ಯುವರಾಜ್ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಯುವ ಮಾರ್ಗ



## ಹಿಂದುಳಿದ ವರ್ಗಗಳ ಒಕ್ಕೂಟದ ಕಾರ್ಯದರ್ಶಿ ಲಕ್ಷ್ಮಣ ಕರ್ಲಿ ಅವರಿಗೆ ಸನ್ಮಾನ



ಯುವಮಾರ್ಗ ಸುದ್ದಿ

**ಮಸ್ಕಿ,ನ.29–**ತಾಲೂಕು ಹಿಂದುಳಿದ ವರ್ಗಗಳ ಒಕ್ಕೂಟದ ಕಾರ್ಯದರ್ಶಿಯಾಗಿ ಆಯ್ಕೆಯಾದ ಲಕ್ಷ್ಮಣ ಕರ್ಲಿ ಅವರಿಗೆ ಸನ್ಮಾನ

ಮಸ್ಕಿ ತಾಲೂಕು ಹಿಂದುಳಿದ ವರ್ಗಗಳ ಒಕ್ಕೂಟದ ಕಾರ್ಯದರ್ಶಿಯಾಗಿ ಆಯ್ಕೆಯಾದ ಲಕ್ಷ್ಮಣ ಕರ್ಲಿ ಅವರನ್ನು ಪದ್ಮಶಾಲಿ ಸಮಾಜದ ಪ್ರಮುಖರು ಮಸ್ಕಿ ನಗರದಲ್ಲಿ ಸನ್ಮಾನಿ ಸಿದರು ಪದ್ಮಶಾಲಿ ಸಮಾಜದ ಪ್ರಮುಖರಾದ ಮಲ್ಲಯ್ಯ ಪಗಡೇಕಲ್, ಮಲ್ಲಿಕಾರ್ಜುನ ಶ್ಯಾಸಲ್, ಡಾ. ಶಂಕರ ಕರ್ಲಿ, ಪರಶುರಾಮ ಕೊಡಗುಂಟಿ, ವೀರೇಶ ಪೂಜಾರಿ ಇನ್ನಿತರರು ಉಪಸ್ಥಿತರಿದ್ದರು.

## ಸಾಲಬಾಧೆ ಮನನೊಂದ ರೈತ ನೇಣಿಗೆ ಶರಣು

**ಅಥಣಿ ,ನ.29–**ಸಾಲಬಾದೆ ಕಿರುಕುಳಕ್ಕೆ ಮನನೊಂದು ರೈತ ನೇಣಿಗೆ ಶರಣಾದ ಘಟನೆ ಅಥಣಿ ತಾಲೂಕಿನ ತಾಂವಶಿ ಗ್ರಾಮದಲ್ಲಿ ಶುಕ್ರವಾರ ನಡೆದಿದೆ. ಕಾಂತೇಶ ಪಾಂಡು ಕುಂಬಾರ(35) ನೇಣಿಗೆ ಶರಣಾದ ಯುವ ರೈತ ಎಂದು ಗುರುತಿಸಿಲಾಗಿದೆ. ಗ್ರಾಮದ ಹೊರವಯದ ಕುಂಬಾರ ತೋಟದ ಗಣೇಶ ಗುಡಿ ಹತ್ತಿರ ಬೇವಿನ ಮರಕ್ಕೆ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ಮೃತ ಕಾಂತೇಶ ಸುಮಾರು ದಿನಗಳಿಂದ ಸಾಲಬಾದೆಯಿಂದ ಮಾನಸಿಕವಾಗಿ ನೊಂದಿದ್ದರು. ರಾಷ್ಟ್ರೀಕೃತ ಬ್ಯಾಂಕ, ಫೈನಾನ್ಸ್, ಸಹಕಾರಿ ಬ್ಯಾಂಕ, ಸಂಘ ಸಂಸ್ಥೆ ಬ್ಯಾಂಕುಗಳಲ್ಲಿ ಒಟ್ಟು 15 ಲಕ್ಷ ರೂ. ಸಾಲ ಮಾಡಿದ್ದರು ಎಂದು ತಿಳಿದು ಬಂದಿದೆ. ಆತ್ಮಹತ್ಯೆ ಮಾಡಿಕೊಂಡ ಕಾಂತೇಶ ಪತ್ನಿ, 3 ಜನ ಹೆಣ್ಣು ಮಕ್ಕಳಿದ್ದಾರೆ. ಗಂಡನನ್ನು ಕಳೆದುಕೊಂಡ ಪತ್ನಿ ಸಾಲ ಸಂಕಷ್ಟದಿಂದ ಪತಿ ಆತ್ಮಹತ್ಯೆ ಮಾಡಿಕೊಂಡಿದ್ದು ನನ್ನ ಮಕ್ಕಳ ಭವಿಷ್ಯಕ್ಕಾಗಿ ಸರ್ಕಾರದಿಂದ ನೆರವಿಗೆ ಮನವಿ ಮಾಡಿದ್ದಾರೆ. ಘಟನೆ ಕುರಿತು ಅಥಣಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ

## ಅಮಿತ್ ಶಾರಿಂದ ಪ್ರಶಸ್ತಿ ಸ್ವೀಕಾರ




ಯುವಮಾರ್ಗ ಸುದ್ದಿ

**ಕವಿತಾಳ,ನ.29–**ದೇಶದ ಅತ್ಯುತ್ತಮ ಪೊಲೀಸ್ ಠಾಣೆಯಲ್ಲಿ ಪ್ರಶಸ್ತಿ ಸ್ವೀಕರಿಸಿದ ಕವಿತಾಳ ಪೊಲೀಸ್ ಠಾಣೆಯ ಪಿಎಸ್ಐ ಗುರುಚಂದ್ರ ಯಾದವ್‌ದೇಶದ 3 ನೇ ಅತ್ಯುತ್ತಮ ಪೊಲೀಸ್ ಠಾಣೆ ಪ್ರಶಸ್ತಿಗೆ ಆಯ್ಕೆಯಾದ ರಾಯಚೂರ ನ ಕವಿತಾಳ ಪೊಲೀಸ್ ಠಾಣೆಯ ಪಿಎಸ್ಐ ಗುರುಚಂದ್ರ ಯಾದವ್ ಅವರು ಛತ್ತೀಸಗಢದ ರಾಯಪುರ ನಲ್ಲಿ ನಡೆದ ಪ್ರಶಸ್ತಿ ಪ್ರಧಾನ ಕಾರ್ಯಕ್ರಮದಲ್ಲಿ ಕೇಂದ್ರ ಗೃಹ ಸಚಿವರಾದ ಅಮಿತ್ ಶಾ ಅವರಿಂದ ದೇಶದ ಅತ್ಯುತ್ತಮ ಪೊಲೀಸ್ ಠಾಣೆಯಲ್ಲಿ ಪ್ರಶಸ್ತಿ ಸ್ವೀಕರಿಸಿದರು

## ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯಿಂದ ಅರ್ಜಿ ಆಹ್ವಾನ

**ರಾಯಚೂರು,ಣ.29–**ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯಿಂದ ಅರ್ಹ ಸಾಧಕ ಕ್ರೀಡಾಪಟುಗಳು ಹಾಗೂ ಇತರರಿಂದ ವಿವಿಧ ಪ್ರಶಸ್ತಿ ಪ್ರೋತ್ಸಾಹಧನ ನೀಡುವ ಯೋಜನೆಗಳು ಚಾಲ್ತಿಯಲ್ಲಿದ್ದು ವಿವಿಧ ಕಾರ್ಯಕ್ರಮಗಳಡಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

2024ನೇ ಸಾಲಿನ ಏಕಲವ್ಯ ಪ್ರಶಸ್ತಿ, ಜೀವಮಾನ ಸಾಧನೆ ಪ್ರಶಸ್ತಿ, ಕರ್ನಾಟಕ ಕ್ರೀಡಾರತ್ನ ಪ್ರಶಸ್ತಿ, ಕರ್ನಾಟಕ ಕ್ರೀಡಾ ಪೋಷಕ ಪ್ರಶಸ್ತಿ, 2025–26ನೇ ಸಾಲಿನ ಗುರಿ – ಒಲಂಪಿಕ್ ಪದಕ, 2023 ಮತ್ತು 2024ನೇ ಸಾಲಿನ ನಗದು ಪುರಸ್ಕಾರ, 2025–26ನೇ ಸಾಲಿನ ಶೈಕ್ಷಣಿಕ ಶುಲ್ಕ ಮರುಪಾವತಿ ಹಾಗೂ ಕ್ರೀಡಾ ವಿದ್ಯಾರ್ಥಿ ವೇತನ ಕಾರ್ಯಕ್ರಮಗಳಿಗೆ ಅರ್ಹ ಇರುವ ಕ್ರೀಡಾಪಟುಗಳು ಇಲಾಖೆಯ ವೆಬ್‌ಸೈಟ್ https://sevasindhu.karnataka.gov.in ರ ಮೂಲಕ ಡಿಸೆಂಬರ್ 03ರೊಳಗೆ ಆನ್‌ಲೈನ್ ಮೂಲಕ ಅರ್ಜಿಗಳನ್ನು ಸಲ್ಲಿಸಬಹುದಾಗಿದೆ.

ಹೆಚ್ಚಿನ ವಿವರಗಳಿಗಾಗಿ ಸಹಾಯಕ ನಿರ್ದೇಶಕರ ಕಚೇರಿ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಜಿಲ್ಲಾ ಕ್ರೀಡಾಂಗಣ ರಾಯಚೂರು ಇವರನ್ನು ಕಚೇರಿ ಸಮಯದಲ್ಲಿ ಸಂಪರ್ಕಿಸಬಹುದಾಗಿದೆ ಎಂದು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ

## ರಾಜ್ಯದಲ್ಲಿ ಹೆಚ್ಚುತ್ತಿರುವ ಸೈಬರ್ ಅಪರಾಧಗಳನ್ನು ತಡೆಯಲು, ಸೋಲಿಡಾರಿಟಿ ಯೂತ್ ಮೂವ್ಮೆಂಟ್‌ನಿಂದ ತಹಶೀಲ್ದಾರ್ ಅವರಿಗೆ ಮನವಿ

ಯುವಮಾರ್ಗ ಸುದ್ದಿ

**ಸಿಂಧನೂರು,ನ.29–** ಸೋಲಿಡಾರಿಟಿ ಯೂತ್ ಮೂವ್ಮೆಂಟ್ ಸಿಂಧನೂರು ಘಟಕದ ವತಿಯಿಂದ ರಾಜ್ಯದಲ್ಲಿ ಹೆಚ್ಚುತ್ತಿರುವ ಸೈಬರ್ ವಂಚನೆ ಹಾಗೂ ಡಿಜಿಟಲ್ ಅಪರಾಧಗಳನ್ನು ತಡೆಯಲು ತುರ್ತು, ಪರಿಣಾಮಕಾರಿ ಮತ್ತು ಕಾನೂನುಬದ್ಧ ಕ್ರಮಗಳನ್ನು ಕೈಗೊಳ್ಳುವಂತೆ ಮನವಿ ಪತ್ರವನ್ನು ತಹಸಿಲ್ದಾರರಿಗೆ ಸಲ್ಲಿಸಲಾಯಿತು. ಅಧ್ಯಕ್ಷರಾದ ಅಬುಲೈಸ್ ನಾಯಕ್ ಅವರ ನೇತೃತ್ವದಲ್ಲಿ ಮನವಿ ಪತ್ರವನ್ನು ಸಲ್ಲಿಸಲಾಯಿತು.

ಮನವಿ ಸಲ್ಲಿಸುವ ಸಂದರ್ಭ ಜಿಲ್ಲಾಧ್ಯಕ್ಷ ಡಾ. ವಸೀಮ್ ಹಾಗೂ ಸಮಾಜಸೇವಕ ಸಿರಾಜ್ ಭಾಷಾ ಅವರು ಮಾತನಾಡಿ, ಸೈಬರ್ ಅಪರಾಧಗಳ ಗಂಭೀರತೆ ಮತ್ತು ಸರ್ಕಾರ ಕೈಗೊಳ್ಳಬೇಕಾದ ತುರ್ತು ಕ್ರಮಗಳ ಬಗ್ಗೆ ಅಭಿಪ್ರಾಯ ವ್ಯಕ್ತಪಡಿಸಿದರು.

**ಪ್ರಮುಖ ಬೇಡಿಕೆಗಳು:**ಡಿಸೆಂಬರ್ 8 ರಿಂದ ಪ್ರಾರಂಭವಾಗುವ ಚಳಿಗಾಲದ ಅಧಿವೇಶನದಲ್ಲಿ ಸೈಬರ್ ವಂಚನೆ ವಿಚಾರವನ್ನು ಆದ್ಯತೆಯಿಂದ ಚರ್ಚಿಸಿ ಕಠಿಣ ಕ್ರಮ ಕೈಗೊಳ್ಳಬೇಕು.ಸೈಬರ್ ವಂಚನೆಯ ಪರಿಣಾಮವಾಗಿ ಜನರು ತಮ್ಮ ಕಷ್ಟಪಟ್ಟು ಕೂಡಿಟ್ಟ ಹಣ ಕಳೆದುಕೊಂಡು ಭಯಭೀತರಾಗುತ್ತಿದ್ದಾರೆ. ಕೆಲವರು ಆತ್ಮಹತ್ಯೆಗೆ ಸಹ ಶರಣಾಗುತ್ತಿರುವುದು ಆತಂಕಕಾರಿ. ಸರ್ಕಾರ ಜನರ ಭದ್ರತೆಯನ್ನು ಖಚಿತಪಡಿಸುವ ಬಲವಾದ ರಕ್ಷಣಾ ಕ್ರಮಗಳನ್ನು ಜಾರಿಗೆ ತರಬೇಕು.ಸಾಮಾಜಿಕ ಜಾಲತಾಣ ಹ್ಯಾಕಿಂಗ್



ತಡೆಯಲು ಯುವಕರು ಹಾಗೂ ನಾಗರಿಕರಲ್ಲಿ ಜಾಗೃತಿ ಮೂಡಿಸುವ ಕಾರ್ಯಕ್ರಮಗಳನ್ನು ಬಲಪಡಿಸಬೇಕು. ಸೋಲಿ ಡಾರಿಟಿ ಯೂತ್ ಮೂವ್ಮೆಂಟ್ ನೀಡಿರುವ ತಾಂತ್ರಿಕ ಸಲಹೆಗಳು ಮತ್ತು ಶಿಫಾರಸುಗಳನ್ನು ಸರ್ಕಾರ ತಕ್ಷಣ ಪರಿಗಣಿಸಿ ಜಾರಿಗೆ ತರಬೇಕು.

ಬಸವರಾಜ್ ಬಾದರ್ಲಿ, ಸೊಹೈಲ್ ದೇಸಾಯಿ, ಇಸ್ಮಾಯಿಲ್ ಸಾಬ್, ನೈಮ್ ಇರ್ಫಾನ್, ಸೈಯದ್ ಅಝರ್ ಉದ್ದಿನ್, ಉಮರ್, ಖಾಜಾ, ಫಾರೂಕ್, ಮೋಷ, ವಾಜಿದ್, ರಿಯಾಜ್, ಅನ್ವರ್ ಸಾಬ್ ಸೇರಿದಂತೆ ಅನೇಕ ಪದಾಧಿಕಾರಿಗಳು ಮತ್ತು ಸದಸ್ಯರು ಉಪಸ್ಥಿತರಿದ್ದರು.

## ಗಾಂಧಿ ಗ್ರಾಮ ಪುರಸ್ಕಾರಕ್ಕೆ ಆಯ್ಕೆಗೊಂಡ ಪಂಚಾಯತಿಗೆ ಜಿಲ್ಲಾ ಉಪಕಾರ್ಯದರ್ಶಿ ಭೇಟಿ

ಯುವಮಾರ್ಗ ಸುದ್ದಿ

**ರಾಯಚೂರು,ನ.29–**ಜಿಲ್ಲಾ ಉಪ ಕಾರ್ಯದರ್ಶಿ ಹಾಲ್ ಸಿದ್ದಪ್ಪ ಪೂಜಾರಿಯವರು ಮಹಾತ್ಮಗಾಂಧಿ ಪುರಸ್ಕಾರಕ್ಕೆ ಆಯ್ಕೆಗೊಂಡ ತಾಲೂಕಿನ ಆರ್.ಎಚ್.ಕ್ಯಾಂಪ್, ಬೂತಲದಿನ್ನಿ. ಹಾಗೂ ಪಗಡದಿನ್ನಿ ಗ್ರಾ.ಪಂ.ಗಳಿಗೆ ಭೇಟಿ ನೀಡಿ, ನೋಂದಾಯಿಸಲಾದ ದಾಖಲೆಗಳ ಪರಿಶೀಲನೆ ಮಾಡಿದರು.

ಆರ್.ಎಚ್.ಕ್ಯಾಂಪ್ 1 ರ ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಬರುವ ಗ್ರಂಥಾಲಯಕ್ಕೆ ಭೇಟಿ ನೀಡಿ, ಹಾಜರಾತಿ ಪರಿಶೀಲಿಸಿ ಸದಸ್ಯರ ನೋಂದಣಿ ಗಣಕಯಂತ್ರದಲ್ಲಿ ನೋಂದಾಯಿಸಲು ಗ್ರಂಥ ಪಾಲಕರಿಗೆ ಸೂಚಿಸಿ, ಕೂಸಿನ ಮನೆಗೆ ಭೇಟಿ ನೀಡಿ ಮಕ್ಕಳಿಗೆ ವೇಳಾಪಟ್ಟಿ ಪ್ರಕಾರ ಪೌಷ್ಟಿಕ ಆಹಾರ ನೀಡಲು ತಿಳಿಸಿ, ಮುಖ್ಯವಾಗಿ ಸ್ವಚ್ಛತೆಯನ್ನು ಕಾಪಾಡಲು ಕೇರ್ ಟೇಕರ್ ಗಳಿಗೆ ಸಲಹೆ ನೀಡಿದರು.

ಆಯುಷ್ಮಾನ್ ಸಮುದಾಯ ಕೇಂದ್ರಕ್ಕೆ ಭೇಟಿ ನೀಡಿ ಸಿಬ್ಬಂದಿಯೊಂದಿಗೆ ಕಾರ್ಯಕಲಾಪದ ಬಗ್ಗೆ ವಿಚಾರಿಸಿ, ಸಿಬ್ಬಂದಿ




ವಸತಿ ನಿಲಯದ ಬಗ್ಗೆ ಮಾಹಿತಿ ಪಡೆದು, ಪ್ರಗತಿ ಮುಂದುವರಿಯಲು ತಾಲೂಕು ವೈದ್ಯಾಧಿಕಾರಿ ಅವರ ಗಮನಕ್ಕೆ ತಂದು ಬೇಗ ಪೂರ್ಣಗೊಳಿಸಲು ಸೂಚಿಸಿದರು.

ಈ ಸಂದರ್ಭದಲ್ಲಿ ಸಹಾಯಕ ನಿರ್ದೇಶಕರಾದ ವೆಂಕಪ್ಪ, ಅಮರಗುಂಡಪ್ಪ ಪಂಚಾಯತಿ ಅಧ್ಯಕ್ಷರು ರಹಮದ್ ಪಾಷಾ, ಅಭಿವೃದ್ಧಿ ಅಧಿಕಾರಿ ಮಲ್ಲೇಶಪ್ಪ, ಧನ್ಯ ಪ್ರಭು, ಬಿ.ಎಫ್.ಟಿ ವೀರಕುಮಾರ ಸೇರಿದಂತೆ ಪಂಚಾಯತಿ ಸಿಬ್ಬಂದಿಗಳು ಇದ್ದರು.

## ಬೆಳೆಹಾನಿಯಾದ ರೈತರಿಗೆ ಪರಿಹಾರ ಪಾವತಿಗೆ ಕ್ರಮ

ಯುವಮಾರ್ಗ ಸುದ್ದಿ

**ರಾಯಚೂರರು,ನ.29–** ರಾಯಚೂರು ಜಿಲ್ಲೆಯ ಬೆಳೆ ಹಾನಿಯಾದ ಒಟ್ಟು 76,942 ರೈತ ಫಲಾನುಭವಿಗಳಿಗೆ ನೇರವಾಗಿ ಡಿಬಿಟಿ ಮುಖಾಂತರ ರೂ.34,36,13,754 ಗಳು ಜೊತೆಗೆ ಹೆಚ್ಚುವರಿಯಾಗಿ ರೂ. 33,01.97,441 ಗಳನ್ನು ರೈತರ ಬ್ಯಾಂಕ್ ಖಾತೆಗೆ ನೇರವಾಗಿ ಡಿಬಿಟಿ ಮುಖಾಂತರ ಪಾವತಿಸುವ ಬಗ್ಗೆ ಜಿಲ್ಲಾಡಳಿತವು ಕ್ರಮ ವಹಿಸಿರುತ್ತದೆ ಎಂದು ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದ ಅಧ್ಯಕ್ಷರು ಆಗಿರುವ ಜಿಲ್ಲಾಧಿಕಾರಿಗಳಾದ ನಿತೀಶ್ ಕೆ ಅವರು ತಿಳಿಸಿದ್ದಾರೆ.



2025–26ನೇ ಸಾಲಿನಲ್ಲಿ ಮುಂಗಾರು ಹಂಗಾಮಿನಲ್ಲಿ ಪ್ರಕೃತಿ ವಿಕೋಪಗಳಿಂದ ಉಂಟಾದ ಬೆಳೆ ಹಾನಿ ಪ್ರಕರಣದ ಬ್ಯಾಚ–1ನೇಯು ಪರಿಹಾರವನ್ನು ಎನ್‌ಡಿಆರ್‌ಎಫ್ ಮತ್ತು ಎಸ್‌ಡಿಆರ್‌ಎಫ್ ಮಾರ್ಗಸೂಚಿಯಂತೆ ರೈತರಿಗೆ ಪಾವತಿಸುವ ಬಗ್ಗೆ ರಾಜ್ಯ ಸರ್ಕಾರ ನಿರ್ದೇಶಿಸಿದಂತ ಜಿಲ್ಲೆಯ ಬೆಳೆ ಹಾನಿಯಾದ ಒಟ್ಟು 76,942 ರೈತ ಫಲಾನುಭವಿಗಳಿಗೆ ನೇರವಾಗಿ ಡಿಬಿಟಿ ಮುಖಾಂತರ ರೂ. 34,36,13,754 ಪಾವತಿಸುವ ಬಗ್ಗೆ ಜಿಲ್ಲಾಡಳಿತವು ಕ್ರಮ ವಹಿಸಿರುತ್ತದೆ. ಮುಂದುವರೆದು, ದಿನಾಂಕ 25–11–2025ರ ಸರ್ಕಾರದ ಆದೇಶದಂತೆ ರಾಜ್ಯ ಸರ್ಕಾರದಿಂದ ಘೋಷಿಸಿರುವ ಹೆಚ್ಚುವರಿ ಪರಿಹಾರವನ್ನು ರೈತರಿಗೆ ಪಾವತಿಸುವ ಬಗ್ಗೆ ದಿನಾಂಕ 27–11–2025 ರಂದು ಸನ್ಮಾನ್ಯ ಮುಖ್ಯ ಮಂತ್ರಿಗಳು ವಿಡಿಯೋ ಸಂವಾದದ ಮುಖಾಂತರ ಚಾಲನೆ ನೀಡಿದ್ದು, ಅದರಂತೆ ಜಿಲ್ಲೆಯ ಒಟ್ಟು 76,941 ರೈತ ಫಲಾನುಭವಿಗಳಿಗೆ ರೂ. 33,01.97,441 ಗಳನ್ನು ಸಹ ರೈತರ ಬ್ಯಾಂಕ್ ಖಾತೆಗೆ ನೇರವಾಗಿ ಡಿಬಿಟಿ ಮುಖಾಂತರ ಪಾವತಿಸುವ ಬಗ್ಗೆ ಜಿಲ್ಲಾಡಳಿತವು ಕ್ರಮ ವಹಿಸಿದೆ.

ಹೆಚ್ಚುವರಿ ಇನ್ಪುಟ್ ಸಬ್ಸಿಡಿ ದರಗಳು ಮತ್ತು ವಿತರಣೆ: ಬೆಳೆ ಹಾನಿಗೊಳಗಾದ ರೈತರಿಗೆ ನೆರವು ನೀಡುವ ಉದ್ದೇಶದಿಂದ, ರಾಜ್ಯ ಸರ್ಕಾರವು ಇನ್ಪುಟ್ ಸಬ್ಸಿಡಿ ದರಗಳನ್ನು ಗರಿಷ್ಠ 2 ಹೆಕ್ಟರ್ ಸೀಮಿತಗೊಳಿಸಿ ಈ ಮುಂದಿನಂತೆ ಹೆಚ್ಚಿಸಿದೆ. ಮಳೆಯಾಶ್ರಿತ ಬೆಳೆಗಳು: ಹೆಕ್ಟೇರ್ 1ಕ್ಕೆ ರೂ. 8,500 ರಿಂದ ರೂ. 17,000 ಹಾಗೂ ನೀರಾವರಿ ಬೆಳೆಗಳು: ಹೆಕ್ಟೇರ್ 1 ಕ್ಕೆ ರೂ. 17,000 ರಿಂದ ರೂ. 25,500 ಮತ್ತು ಬಹುವಾರ್ಷಿಕ ಬೆಳೆಗಳು: ಹೆಕ್ಟೇರ್ 1 ಕ್ಕೆ ರೂ.22,500 ರಿಂದ ರೂ. 31,000 ಎಂದು ಹೆಚ್ಚುವರಿ ಇನ್ಪುಟ್ ಸಬ್ಸಿಡಿ ದರಗಳು ಮತ್ತು ವಿತರಣೆಗೆ ಕ್ರಮವಹಿಸಲಾಗಿದೆ ಎಂದು ಅವರು ತಿಳಿಸಿದ್ದಾರೆ.

## ಇಂದು ಕವಿತಾಳದಲ್ಲಿ ದಾಸ ಶ್ರೇಷ್ಠ ಕನಕದಾಸರ ಮೂರ್ತಿ ಎನ್ ಎಸ್ ಬಿ ಇಂದ ಉದ್ಘಾಟನೆ

**ಕವಿತಾಳ,ನ.29–**ಸಂಗೀತದ ಒಬ್ಬ ಪ್ರಮುಖ ಕೊಡುಗೆದಾರರು. ಅವರು ಮೂಲತಃ ದಂಡನಾಯಕರಾಗಿದ್ದು, ಯುದ್ಧದಲ್ಲಿ ಗಾಯಗೊಂಡ ನಂತರ ವೈರಾಗ್ಯ ಹೊಂದಿ ಹರಿಭಕ್ತರಾದರು. ಕನಕದಾಸರ ಕೃತಿಗಳಲ್ಲಿ ಭಕ್ತಿ, ತತ್ವಶಾಸ್ತ್ರಗಳ ಜೊತೆಗೆ ಸಾಮಾಜಿಕ ಅಸಮಾನತೆ, ಜಾತಿ ವ್ಯವಸ್ಥೆಯ ವಿರುದ್ಧ ವಿಡಂಬನೆ ಕೂಡ ಇದೆ. ಅವರ ಪ್ರಮುಖ ಕೃತಿಗಳಲ್ಲಿ 'ಮೋಹನತರಂಗಿಣಿ', 'ನಳಚರಿತ್ರೆ', 'ಹರಿಭಕ್ತಿಸಾರ', 'ನರಸಿಂಹ ಸ್ತೋತ್ರ' ಮತ್ತು 'ರಾಮಧ್ಯಾನ ಮಂತ್ರ' ಸೇರಿವೆ.

**ಹುಟ್ಟು ಮತ್ತು ಮೂಲ ಹೆಸರು:** ಕನಕದಾಸರ ಮೂಲ ಹೆಸರು ತಿಮ್ಮಪ್ಪನಾಯಕ. ಅವರು ಸುಮಾರು 1508 ರಲ್ಲಿ ಕರ್ನಾಟಕದ ಕಾಗಿನೆಲೆ ಸಮೀಪದ ಬಾಡ ಗ್ರಾಮದಲ್ಲಿ ಜನಿಸಿದರು.

**ವೃತ್ತಿ:** ಅವರು ಮೊದಲು ದಂಡನಾಯಕರಾಗಿದ್ದರು. ಯುದ್ಧದಲ್ಲಿ ಆದ ಅನುಭವದ ನಂತರ ವೈರಾಗ್ಯ ಹೊಂದಿ ಭಕ್ತಿಯ ಮಾರ್ಗವನ್ನು ಆರಿಸಿಕೊಂಡರು.

**ಶಿಕ್ಷಣ:** ಬಾಲ್ಯದಲ್ಲಿಯೇ ಅವರು ತರ್ಕ, ವ್ಯಾಕರಣ ಮತ್ತು ಮೀಮಾಂಸಗಳಲ್ಲಿ ಪರಿಣತರಾಗಿದ್ದರು.ಸಾಹಿತ್ಯ ಮತ್ತು ಸಂಗೀತ:ಕೀರ್ತನೆಗಳು, ಸುಳಾದಿಗಳು ಮತ್ತು ಉಗಾಭೋಗಗ'ಳನ್ನು ರಚಿಸಿದರು.ಕೀರ್ತನೆಗಳ ಅಂಕಿತನಾಮ 'ಕಾಗಿನೆಲೆಯ ಆದಿಕೇಶವರಾಯ' ಎಂಬುದಾಗಿದೆ. 'ಮೋಹನತರಂಗಿಣಿ' (ಕೃಷ್ಣನ ಕಥೆ), 'ನಳಚರಿತ್ರೆ', 'ಹರಿಭಕ್ತಿಸಾರ', 'ನರಸಿಂಹ ಸ್ತೋತ್ರ' ಮತ್ತು 'ರಾಮಧ್ಯಾನಚರಿತೆ' ಅವರ ಪ್ರಮುಖ ಕೃತಿಗಳು.ಪುರಂದರದಾಸರೊಂದಿಗೆ ಸೇರಿ ಕರ್ನಾಟಕ ಸಂಗೀತಕ್ಕೆ ಅಪಾರ ಕೊಡುಗೆ ನೀಡಿದ್ದಾರೆ.

**ಸಾಮಾಜಿಕ ಕಳಕಳಿ:**ಜಾತಿ ವ್ಯವಸ್ಥೆ ಮತ್ತು ಸಾಮಾಜಿಕ ಅಸಮಾನತೆಗಳನ್ನು ತೀವ್ರವಾಗಿ ವಿರೋಧಿಸಿದರು.ಸಮಾಜದ ಸ್ಥಿತಿಗತಿಗಳನ್ನು ತಿದ್ದುವ ಪ್ರಯತ್ನ ಮಾಡಿದರು.ಅವರ ಕೀರ್ತನೆಗಳಲ್ಲಿ ಸಾಮಾಜಿಕ ಬದಲಾವಣೆಯ ಸಂದೇಶಗಳನ್ನು ನೀಡಿದ್ದಾರೆ.

**ಉಡುಪಿಯ ಕಥೆ:** ಉಡುಪಿಯಲ್ಲಿ ದೇವಸ್ಥಾನದ ಪ್ರವೇಶ ಸಿಗದಿದ್ದಾಗ, ದೇವಸ್ಥಾನದ ಹಿಂಬದಿಯಿಂದ ಹಾಡಿದಾಗ, ಶ್ರೀಕೃಷ್ಣನ ವಿಗ್ರಹವು ತಿರುಗಿ ಭಕ್ತರಿಗೆ ದರ್ಶನ ನೀಡಿತು ಎಂಬ ನಂಬಿಕೆಯಿದೆ. ಈ ಕಾರಣಕ್ಕೆ ದೇವಸ್ಥಾನದ ಹಿಂಭಾಗ 'ಕನಕನ ಕಿಂಡಿ' ಎಂಬ ಕಿಟಕಿಯನ್ನು ನಿರ್ಮಿಸಲಾಗಿದೆ.

**ಸರಕಾರಿ ಆಚರಣೆ:** ಕರ್ನಾಟಕ ಸರ್ಕಾರವು 2008 ರಿಂದ ಕನಕದಾಸರ ಜಯಂತಿಯನ್ನು ಅಧಿಕೃತವಾಗಿ ಆಚರಿಸುತ್ತಿದೆ.

## ನಿಮ್ಮ ನೆರೆಹೊರೆಯವರ ಜೊತೆ ಅವರು ಯಾವುದೇ ಜಾತಿಯವರಾಗಲಿ ಉತ್ತಮ ಸಂಬಂಧ ಇರಿಸಿ – ಬಾಬರ್ ಪಾಷಾ




ಯುವಮಾರ್ಗ ಸುದ್ದಿ

**ಸಿಂದನೂರು,ನ.29–**ಜಮಾತೆ ಇಸ್ಲಾಮಿ ಹಿಂದ್ ಸಿಂಧನೂರು ವತಿಯಿಂದ ಮಸ್ ಜಿದೇ ಹುದಾ ಸಭಾಂಗಣದಲ್ಲಿ ಸದ್ಭಾವ ಸಂಗಮ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು ನವೆಂಬರ್ 21 ರಿಂದ 30 ರ ವರೆಗೆ ರಾಷ್ಟ್ರವ್ಯಾಪಿ ನೆರೆಹೊರೆಯವರ ಹಕ್ಕುಗಳು ಮಾದರಿ ನೆರೆಹೊರೆ ,ಮಾದರಿ ಸಮಾಜ ವಿಷಯದಡಿ ಕಾರ್ಯಕ್ರಮ ಆಯೋಜಿಸಿದ ಹಿನ್ನಲೆಯಲ್ಲಿ ಇಂದು ಈ ಕಾರ್ಯಕ್ರಮ ನಡೆಯಿತು

ನಮ್ಮ ನೆಚ್ಚಿನ ಸಿನಿಮಾ ತಾರೆಯರು ಕ್ರಿಕೆಟ್ ಆಟಗಾರರು ತೀರಿದಾಗ ನಾವು ದಿನಾಪೂರ್ತಿ ದುಃಖ ಪಡುತ್ತೇವೆ ಶ್ಲೋಕ ವ್ಯಕ್ತಪಡಿಸುತ್ತೇವೆ ಆದರೆ ನಮ್ಮ ನೆರೆಹೊರೆಯ ಮನೆಯವರು ಆಸ್ಪತ್ರೆಗೆ ದಾಖಲಾಗಿರುವ ವಿಷಯ ಇಂದಿನ ನಮ್ಮ ಪೀಳಿಗೆಗೆ ಗೊತ್ತಿರುವುದಿಲ್ಲ ಅವರ ಆರೋಗ್ಯ ವಿಚಾರಿಸಲು ನಾವು ಹೋಗುವುದಿಲ್ಲ ಪಕ್ಕದ ಮನೆಯಲ್ಲಿ ಯಾರಿದ್ದಾರೆ ಎಂಬುದು ಕೂಡ ನಮಗೆ ಗೊತ್ತಿರುವುದಿಲ್ಲ ಅವರ ಹೆಸರು ಗೊತ್ತಿರುವುದಿಲ್ಲ ನಿಮ್ಮ ನೆರೆಹೊರೆಯರ ಬಗ್ಗೆ ಕಾಳಜಿ ವಹಿಸಿರಿ ಅವರು ಯಾವುದೇ ಧರ್ಮದವರಾಗಿರಲಿ,ಜಾತಿಯವರಾಗಿರಲಿ ಅವರ ಕಷ್ಟ ಸುಖಗಳಲ್ಲಿ ಭಾಗವಹಿಸಬೇಕೆಂದು ನಮ್ಮ ಸಂಘಟನೆ ಬಯಸುತ್ತಿದೆ ಎಂದು ಬಾಬರ್ ಬೇಗ್ ಪ್ರಾಸ್ತಾವಿಕವಾಗಿ ಮಾತನಾಡಿದರು

ಈ ಕಾರ್ಯಕರ್ಮದಲ್ಲಿ ಅತಿಥಿಗಳಾಗಿ ಕನ್ನಡ ಸಾಹಿತ್ಯ ಪರಿಷತ್ತು ಸಿಂಧನೂರಿನ ಅಧ್ಯಕ್ಷರು ಹೆಚ್. ಎಫ್ ಮಸ್ಕಿ, ಹೆಚ್ ಎನ್ ಬಡಿಗೇರ್ ,ನಾರಾಯಣ ಬೆಳಗುರ್ಕಿ ಅವರು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರು ಈ ಕಾರ್ಯಕ್ರಮದಲ್ಲಿ ಸೂಡಾ ಅಧ್ಯಕ್ಷ ಶ್ರೀ ಬಾಬಾಗೌಡ ಬಾದರ್ಲಿ, ಜಮಾ ಅತೆ ಇಸ್ಲಾಮಿ ಹಿಂದ್ ಅಧ್ಯಕ್ಷ ಟಿ ಹುಸೇನ್ ಸಾಬ್,ಬಾಬರ್ ಪಾಷಾ,ಜಿಲಾನಿ ಪಾಷಾ,ಪತ್ರಕರ್ತ ಅಶೋಕ್ ಬೆನ್ನೂರು,ಚಂದ್ರಶೇಖ್,ಮಹಮ್ಮದ್ ಮುಸ್ತಫಾ ಹಾಗೂ ಮುಖಂಡರು ಗಣ್ಯರು ಉಪಸ್ತಿತರಿದ್ದರು

## ಪರಭಾಷೆಯ ವಿರುದ್ಧ ಧೈರ್ಯವಾಗಿ ಹೋರಾಡಲು ಕರೆ

**ಬೀದರ ,ನ.29–**ತಾಲೂಕಿನ ಗೌಸಪುರ ಗಡಿ ಗ್ರಾಮದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ಕನ್ನಡ ಚಿಂತನೆ, ಕನ್ನಡ ಭಾಷೆಯ ಜಾಗೃತಿ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮವನ್ನು ಕಲ್ಯಾಣ ಕರ್ನಾಟಕ ಅಶ್ವಿನಿ ಶಿಕ್ಷಣ ಸಂಸ್ಥೆ ಯಾಕತಪೂರ ಅವರ ವತಿಯಿಂದ ವಿಜೃಂಭಣೆಯಿಂದ ಆಯೋಜಿಸಲಾಯಿತು.ಕನ್ನಡ ತಾಯಿ ಭುವನೇಶ್ವರಿ ದೇವಿಗೆ ಪೂಜಾಪೂರ್ವಕವಾಗಿ ಹೂಮಾಲೆ ಸಮರ್ಪಿಸುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು.

ಉದ್ಘಾಟಕರಾಗಿ ಭಾಗವಹಿಸಿದ ಶಾಲೆಯ ಎಸ್‌ಡಿಎಂಸಿ ಅಧ್ಯಕ್ಷೆ ಶ್ರೀಮತಿ ಗೀತಾ ಅವರು ಮಾತನಾಡಿ,"ಗಡಿ ಭಾಗದ ಮಕ್ಕಳಿಗೆ ಕನ್ನಡ ಕಲಿಸುವ ಶಿಕ್ಷಕರನ್ನು ವಿಶೇಷವಾಗಿ ಆಯ್ಕೆ ಮಾಡಿ ನಿರಂತರ ತರಗತಿಗಳನ್ನು ನಡೆಸಬೇಕು" ಎಂದು ಅಭಿಪ್ರಾಯಪಟ್ಟರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ ಮುಖ್ಯಗುರು ಶ್ರೀಮತಿ ಕಲಾವತಿ ಮಾತನಾಡಿ, "ಈ ಪ್ರದೇಶದಲ್ಲಿ ಕನ್ನಡ ಮತ್ತು ತೆಲುಗು ಭಾಷೆಗಳು ಬಳಸಲ್ಪಡುತ್ತವೆ. ಆದರೆ ಕನ್ನಡ ಸಾವಿರಾರು ವರ್ಷಗಳ ಶ್ರೀಮಂತ ಪರಂಪರೆಯನ್ನು ಹೊಂದಿದೆ.

ಅನೇಕ ಕವಿಗಳು, ವಾಸ್ತುಶಿಲ್ಪಿಗಳು, ರಾಜವಂಶಗಳು ಕನ್ನಡ ನಾಡಿಗೆ ವೈಭವ ತುಂಬಿವೆ. ಕನ್ನಡಕ್ಕೆ ತನ್ನದೇ ಆದ ಅಸ್ತಿತ್ವವಿದೆ" ಎಂದು ನೆನಪಿಸಿದರು.ಮುಖ್ಯ ಭಾಷಣ ಮಾಡಿದ ಕಲ್ಯಾಣ ಕರ್ನಾಟಕ ಅಶ್ವಿನಿ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಕುಪೇಂದ್ರ ಎಸ್. ಹೂಸಮನಿ ಅವರು ಹೇಳಿದರು

"ಗೌಸಪುರ ಗ್ರಾಮವು ತೆಲಂಗಾಣ ಗಡಿಯನ್ನು ಸ್ಪರ್ಶಿಸುವ ಪ್ರದೇಶ. ಇಲ್ಲಿ ಕನ್ನಡ ಮಾತನಾಡುವ ಜನರ ಸಂಖ್ಯೆ ಹೆಚ್ಚು. ಇಂತಹ ಗಡಿ ಪ್ರದೇಶಗಳಲ್ಲಿ ಕನ್ನಡ ಭಾಷಾ ಪ್ರಯೋಗಾಲಯಗಳನ್ನು ತೆರೆಯಬೇಕು. ಕನ್ನಡದ ಮೇಲೆ ಮಕ್ಕಳಲ್ಲಿ ಮತ್ತು ಜನರಲ್ಲಿ ಪ್ರೀತಿ ಮೂಡಿಸಬೇಕು.ಕನ್ನಡ ಮಾಧ್ಯಮದ ಮುರಾಜಿ ದೇಸಾಯಿ ಶಾಲೆಗಳನ್ನೂ ಆರಂಭಿಸಿ ಕನ್ನಡ ಶಿಕ್ಷಣಕ್ಕೆ ಬಲ ನೀಡಬೇಕು. ಕನ್ನಡದಲ್ಲಿ ಓದಿದ ಮಕ್ಕಳಿಗೆ ವಿಶೇಷ ಸೌಲಭ್ಯಗಳು ದೊರಕುವಂತೆ ಸರ್ಕಾರ ಕ್ರಮ ಕೈಗೊಳ್ಳಬೇಕು" ಎಂದು ಹೇಳಿದರು.

ಹಾಗೆಯೇ ಮನೆ ಮನೆಗೆ ಕನ್ನಡದ ಜಾಗೃತಿ ತಲುಪಬೇಕು. ಕನ್ನಡದ ಕೆಂಪು ಹರಡಬೇಕು. ಈ ಶ್ರೀಮಂತ ಭಾಷೆಯ ಸಂಸ್ಕೃತಿಯ ಬೆಳಕು ಗಡಿಯಾಚೆಗೂ ಹರಡಬೇಕು. ಆಗ ಮಾತ್ರ ಕನ್ನಡ ಉಳಿಯುತ್ತದೆ" ಎಂದು ಹೇಳಿದರು.

ಗೌರವ ಅತಿಥಿಯಾಗಿ ಹಾಜರಿದ್ದ ಗೌಸೊದ್ದಿನ್ ಅವರು,"ಕನ್ನಡ ಭಾಷೆಯನ್ನು ಉಳಿಸುವುದು, ಬೆಳೆಸುವುದು ಪ್ರತಿಯೊಬ್ಬರ ಕರ್ತವ್ಯ" ಎಂದು ಸಲಹೆ ನೀಡಿದರು.ಕಾರ್ಯಕ್ರಮದಲ್ಲಿ ಯುವ ಮುಖಂಡ ಮಾಂತೇಶ್ ಸೋಲಾಪುರೆ, ಶಿಕ್ಷಣಾಭಿಮಾನಿಗಳು ದಶರಥ, ಶಶಿಕಾಂತ ಸೇರಿದಂತೆ ಗ್ರಾಮಸ್ಥರು, ಮಕ್ಕಳು ಮತ್ತು ಶಿಕ್ಷಕರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಕಾರ್ಯಕ್ರಮ ಯಶಸ್ವಿಗೊಳಿಸಿದರು.

Owned, Printed and published by ANILKUMAR H from Plot No. # 3-5-415/-A MANVI Pooja Rice Mill, Near Kataraki Road, Manvi Tq. Manvi, Dist, Raichur-584123, Printed at MAA FRIENDS PRINTING PRESS, Plot No. # 3-5-415/-A Pooja Rice Mill Near Kataraki Road, Manvi Tq. Manvi, Dist: Raichur-584123, State: Karnataka Editor: ANILKUMAR H